ಕಲ್ಯಾಣ ಕರ್ನಾಟಕದ ಪ್ರತಿಬಿಂಬ......

ವಿಜಯನಗರ ಜಿಲ್ಲಾ ಆವೃತ್ತಿ

# ವಾರ್ತಾ ಲೋಕ

"VARTHA LOKA" Kannada Daily Morning News Paper, VIJAYNAGAR. Dist.: Vijaynagar

ಕನ್ನಡ ದಿನಪತ್ರಿಕೆ

ಕೊಪ್ಪಳ । ರಾಯಚೂರು । ಬಳ್ಳಾರಿ । ವಿಜಯನಗರ । ಯಾದಗಿರಿ । ಬೆಂಗಳೂರು । ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜ.

ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜ.

E-mail ID : varthalokahpt@gmail.com

ವಾರ್ತಾ ಲೋಕ
ಕನ್ನಡ ದಿನ ಪತ್ರಿಕೆ ಕಛೇರಿ
ರಾಜಾಸಾಬ ಕಂಪೌಂಡ್,
ಕುಲಾಯಪ್ಪ ಬಿಲ್ಡಿಂಗ್
ಎದುರುಗಡೆ, 1ನೇ ಕ್ರಾಸ್
ಪಟೇಲ್ ನಗರ,
ಹೊಸಪೇಟೆ
ಮೊ.ನಂ : 9482156289

VOLUME : 01 | ISSUE : 139 | Sunday 13-10-2024 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-

## ಸಂಕ್ಷಿಪ್ತ ವಾರ್ತೆ

### ನಿಧನ ವಾರ್ತೆ



● ವಾರ್ತಾಲೋಕ ವಾರ್ತೆ

**ಅಕ್ಟೋಬರ್ 12.** ಕೂಡ್ಲಿಗಿ ತಾಲ್ಲೂಕು ಜರ್ಮಲಿ ಗ್ರಾಮದ ದಿವಂಗತ ಸಾಹುಕಾರ ಸಿದ್ದಲಿಂಗಪ್ಪನವರ ಧರ್ಮಪತ್ನಿಯವರಾದ ಶ್ರೀಮತಿ ಸಿ.ಸಾವಿತ್ರಮ್ಮ (79 ವರ್ಷ) ರವರು ವಯೋಸಹಜವಾಗಿ ದಿನಾಂಕ 12.10.2024 ರ ಶನಿವಾರ ಬೆಳಗಿನಜಾವ 5.30ಕ್ಕೆ ದೈವಾಧೀನರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಸಂಸ್ಕಾರವನ್ನು 13.10.2024 ಭಾನುವಾರ ಮೃತರ ಸ್ವಗ್ರಾಮ ಜರ್ಮಲಿಯಲ್ಲಿ ಬೆಳಿಗ್ಗೆ
10.00 ಗಂಟೆಗೆ ನೆರವೇರಿಸಲಾಗುವುದು.
ಮೃತರು ನಾಲ್ಕು ಗಂಡು ಮಕ್ಕಳು,ಇಬ್ಬರು ಹೆಣ್ಣು ಮಕ್ಕಳು ಅಪಾರ ಬಂಧು ಬಳಗವನ್ನಗಲಿ ಸ್ವರ್ಗಸ್ಥರಾಗಿರುತ್ತಾರೆ.
ಇಂತಿ ದುಃಖತಪ್ತರು
ದಿವಂಗತ ಸಾಹುಕಾರ ಸಿದ್ದಲಿಂಗಪ್ಪನವರ ಮಕ್ಕಳಾದ
ಸಿ. ರಾಜಶೇಖರ್ ನಿವೃತ್ತ ಪ್ರಧಾನ ಜಿಲ್ಲಾ ನ್ಯಾಯಾಧೀಶರು,
ಜೆ. ಸಿ.ಧನುಂಜಯ ತಾಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷರು,
ಸಿ. ಸಿದ್ದೇಶ್ವರ ವರ್ತಕರು
ಜೆ.ಸಿ. ಶಶಿಧರ ಎ ಪಿ ಎಂ ಸಿ ಮಾಜಿ ಅಧ್ಯಕ್ಷರು ಹಾಗೂ ಸೊಸೆಯಂದಿರು ಮತ್ತು ಮೊಮ್ಮಕ್ಕಳು, ಅಪಾರ ಬಂಧು-ಮಿತ್ರರು.
**ವರದಿ ಹೆಚ್ ವೀರಣ್ಣ.**

### ದಸರಾ ಹಬ್ಬದ ಪ್ರಯುಕ್ತ ಅನಾಥಾಶ್ರಮದಲ್ಲಿ ಬಟ್ಟೆ ಮತ್ತು ಸಿಹಿ ಊಟ ವಿತರಣೆ



● ವಾರ್ತಾಲೋಕ ವಾರ್ತೆ

**ಬಳ್ಳಾರಿ ಅಕ್ಟೋಬರ್ 12.** ವಿಜಯದಶಮಿ ದಸರಾ ಹಬ್ಬದ ಪ್ರಯುಕ್ತ ಇಂದು ನಗರದ ಕೌಲ್ ಬಜಾರ್ ಪ್ರದೇಶದ ಜಾಗೃತಿ ನಗರದಲ್ಲಿರುವ ಸ್ಲಂ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯ ಚಿಂತನ ಸಂಸ್ಥೆಯಲ್ಲಿನ ಮಕ್ಕಳಿಗೆ ಹೊಸ ಬಟ್ಟೆ ಮತ್ತು ಸಿಹಿ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು.
ಅದೇ ಪ್ರದೇಶದ ಆದಿತ್ಯ ತಾಯಿ ಎನ್ನುವ ಪೋಷಕರು ತಮ್ಮ ಮಗನ ಹುಟ್ಟು ಹಬ್ಬದ ವಿಶೇಷವಾಗಿ ಆಶ್ರಮದ ಮಕ್ಕಳಿಗೆ ಹೊಸ ಬಟ್ಟೆಯನ್ನು ವಿತರಿಸಿದರು, ಮತ್ತು ಆಶ್ರಮದ ವತಿಯಿಂದ ಸಿಹಿ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಸಂದರ್ಭದಲ್ಲಿ ವಿದ್ಯಾರ್ಥಿ ಆದಿತ್ಯ ಸಾಯಿ ಮತ್ತು ಅವರ ತಂದೆ ಮುರಳಿ, ಸಂಸ್ಥೆಯ ವ್ಯವಸ್ಥಾಪಕ ವಿರೂಪಾಕ್ಷಯ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

### ವಿಜಯದಶಮಿ ಹಬ್ಬದಲ್ಲಿ ಬಸವ ಬುದ್ಧ ಅಂಬೇಡ್ಕರ ಫೋಟೋ ಇಟ್ಟು ಪೂಜೆ ಸಲ್ಲಿಸಿದ ಕಮಿನಿಸ್ಟ್ ಪಕ್ಷದ ಕಾರ್ಯದರ್ಶಿ ಕರಿಯಪ್ಪ

● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ: ಅ12.** ಮರಬ ಗ್ರಾಮ ಪಂಚಾಯತಿಯ ಹಾಲಿ ಗ್ರಾಮ ಪಂಚಾಯತಿ ಉಪಾಧ್ಯಕ್ಷರಾದ ಮರಬನಹಳ್ಳಿ ಗ್ರಾಮ ಪಂಚಾಯತಿ ಸದಸ್ಯರಾದ ಭಾರತ ಕಮ್ಯುನಿಸ್ಟ್ ಪಕ್ಷದ ಕೂಡ್ಲಿಗಿತಾಲೂಕು ಕಾರ್ಯದರ್ಶಿಗಳಾದ ಕರಿಯಪ್ಪನವರು ಪದವಿ ಮುಗಿಸಿ ನರಸಿಂಗ್ ತರಬೇತಿ ಮುಗಿಸಿ ಕಾರ್ಲ್ ಮಾರ್ಕ್ಸ್ ಸಿದ್ದಾಂತವನ್ನು ಮೈಗೂಡಿಸಿಕೊಂಡು ಸಮ ಸಮಾಜವನ್ನು ಸಮಾಜವಾದದತ್ತ ಮುನ್ನಡೆಯುವ ನಿಟ್ಟಿನಲ್ಲಿ ಬದುಕಿಗಾಗಿ ತಾಸಿಲ್ದಾರ್ ಕಚೇರಿ ಮುಂದೆ ಪತ್ರ ಬರೆದು ಜನರು ತಿಳಿದಷ್ಟು ನೀಡುವ ಹಣದಲ್ಲಿ ಹೆಂಡತಿ ಮತ್ತು ಇಬ್ಬರ ಮಕ್ಕಳ ಜೊತೆ ಜೀವನ ಮಾಡುತ್ತಿದ್ದು ಇಂದು ವಿಜಯದಶಮಿ ಹಬ್ಬದಂದು ತನ್ನ ಮನೆಯಲ್ಲಿ ಬಸವ ಮತ್ತು ಬುದ್ಧ ಅಂಬೇಡ್ಕರರ ಇರುವ ಫೋಟೋವನ್ನು ಇಟ್ಟು ಇವರೇ ನಮ್ಮ ಆರಾಧ್ಯ ದೇವರುಗಳೆಂದು ವಿಜಯದಶಮಿಯ ಬನ್ನಿ ಹಬ್ಬವನ್ನು ಆಚರಿಸಿದ್ದಾರೆ ತನ್ನ ಮಗ ಮತ್ತು ಮಗಳ ಹೆಂಡತಿಯ ಜೊತೆಯಲ್ಲಿ ಫೋಟೋದ ಮುಂದೆ ವಿಜಯದಶಮಿ ಆಚರಿಸಿ ಅವರ ಆದರ್ಶಗಳು ನಮಗೆಲ್ಲ ಈ ದಿನಮಾನಗಳಲ್ಲಿ ನಮ್ಮಂತ ಸಾವಿರಾರು ಯುವಕರಗಳಿಗೆ ಸ್ಪೂರ್ತಿದಾಯಕವಾಗಲಿ ಮುಂದಿನ ಪೀಳಿಗೆಗೂ ಅವರ ಆದರ್ಶ ಪ್ರತಿಯೊಬ್ಬ ಮನುಷ್ಯರಿಗೂ ಆದರ್ಶಗಳಾಗಿ ಪ್ರತಿಯೊಬ್ಬರನ್ನು ಬದಲಾಯಿಸಲಿ ಸಮ ಸಮಾಜದ ನಿರ್ಮಾಣದ ಕಡೆ ಮೇಲು. ಕೀಳಿಇರುಮೆ ಎನ್ನದೆ ಜಾತಿ ಧರ್ಮವಿಲ್ಲದೆ ನನ್ನದು ನಾನು ಎಂಬ ಅಹಂಕಾರವನ್ನು ಬಿಟ್ಟು ಪ್ರತಿಯೊಬ್ಬರನ್ನು ಸಮಾನತೆಯನ್ನು ನೋಡುತ್ತಾ ಸಮ ಬಾಳ್ವೆಯೊಂದಿಗೆ ಸಮ ಸಮಾಜ ನಿರ್ಮಾಣ ಮಾಡೋಣ ಎಂಬ ಕನಸಿನೊಂದಿಗೆ ವಿಜಯದಶಮಿ ಆಚರಿಸಿದ್ದಾರೆ.
ವರದಿ ಹೆಚ್ಚು ವೀರಣ್ಣ

# ತೌಡೂರು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದಲ್ಲಿ ಭಾರಿ ಅವ್ಯವಹಾರ ರೈತರ ಹೆಸರಿನಲ್ಲಿ ಮೋಸ

● ವಾರ್ತಾಲೋಕ ವಾರ್ತೆ



**ಹೊಸಪೇಟೆ: ಅ12.** ಹರಪನಹಳ್ಳಿ ತಾಲೂಕು ತೌಡೂರು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದಲ್ಲಿ ಅವ್ಯವಹಾರ ನಡೆದಿದ್ದು, ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ಸದಸ್ಯರು ಹಾಗೂ ಪದಾಧಿಕಾರಿಗಳು ಅಪರ ಜಿಲ್ಲಾಧಿಕಾರಿ ಹಾಗೂ ಎಸ್ಪಿ ಅವರಿಗೆ ಗುರುವಾರ ಮನವಿ ಸಲ್ಲಿಸಿದರು.
ತೌಡೂರು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಮುಖ್ಯ ಅಧಿಕಾರಿ ಪರಮೇಶ್ವರಪ್ಪ ಹಾಗೂ ಆಡಳಿತ ಮಂಡಳಿ ಪದಾಧಿಕಾರಿಗಳು ಹಲವು ವರ್ಷಗಳಿಂದ ನೂರಾರು ರೈತರಿಗೆ ಸಾಲ ನೀಡಿದ್ದೇವೆಂದು ಪಹಣಿ ಹಾಗೂ ಇತರ ದಾಖಲಾತಿ ಪಡೆದುಕೊಂಡು ಖಾಲಿ ಚೆಕ್ ಹಾಗೂ ಸಂಬಂಧಿಸಿದ ದಾಖಲೆ ಸಹಿ ಮಾಡಿಸಿಕೊಂಡು ಅಲ್ಪ ಸ್ವಲ್ಪ ಸಾಲದ ಹಣ ನೀಡಿ ಜಿಲ್ಲಾ ಸಹಕಾರ ಬ್ಯಾಂಕಿನಲ್ಲಿ ರೈತರ. ಹೆಸರಿನಲ್ಲಿ ಹೆಚ್ಚು ಸಾಲ ಮಂಜೂರು ಮಾಡಿಸಿಕೊಂಡಿದ್ದಾರೆ. ಕೆಲವು
ರೈತರ ಪಹಣಿಗಳನ್ನು ಕಂಪ್ಯೂಟರ್‌ನಲ್ಲಿ ತೆಗೆದುಕೊಂಡು ರೈತರ ಗಮನಕ್ಕೆ ತರದೆ ರೈತರ ಯಾವುದೇ ಸಹಿ ಮಾಡಿಸಿಕೊಳ್ಳದೇ, ಸಾಲ ಮಂಜೂರು ಮಾಡಿಕೊಂಡು ವಂಚನೆ ಮಾಡಿದ್ದಾರೆ. - ಮರಣ ಹೊಂದಿದ ರೈತರ ಹೆಸರಿನಲ್ಲಿ ಪಹಣಿ, ಮತ್ತು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸಾಲ - ಮಂಜೂರು ಮಾಡಿಕೊಂಡು ರೈತರ ಸಾಲದ ಹಣವನ್ನು ರೈತರಿಗೆ ನೀಡದೇ ವಂಚಿಸಲಾಗಿದೆ. ಮಹಿಳಾ ಸ್ವಸಹಾಯ ಸಂಘಗಳ ಉಳಿತಾಯದ ಹಣ, ಸಣ್ಣ ವ್ಯಾಪಾರಸ್ಥರ ಠೇವಣಿ ಹಣ ಬ್ಯಾಂಕಿಗೆ ಕಟ್ಟದೇ ಕೋಟಿ, ಕೋಟಿ ಹಣ ತೆಗೆದುಕೊಂಡು ಪರಾರಿಯಾಗಿದ್ದಾರೆ ಎಂದು ದೂರಿದರು.
ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಂದ ರೈತರಿಗೆ ನೋಟಿಸ್ ನೀಡಲಾಗುತ್ತಿದೆ. . ರೈತರಿಗೆ ಮೋಸ ಮಾಡಿ ಪರಾರಿಯಾದ ಪರಮೇಶಪ್ಪ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.
ನಿಂಗಮ್ಮ ತೌಡೂರು ಎಂಬ ಕೃಷಿ ಮಹಿಳೆ 2019ರ ಅಕ್ಟೋಬರ್ ಮೃತಪಟ್ಟಿದ್ದಾರೆ.
2020-21ನೇ ಸಾಲಿನಲ್ಲಿ ಅವರು ಮರಣ ಹೊಂದಿದ ನಂತರ ಸಾಲ ಮಂಜೂರು ಮಾಡಲಾಗಿದೆ. ರೈತ ಬಸವರಾಜಗೌಡರ ಜಮೀನಿನ ಪಹಣಿ ಪಡೆದು, ಅವರ ಹೆಸರಿನಲ್ಲಿ ಸಾಲ ಪಡೆದಿದ್ದಾರೆ. ಇನ್ನೂ ಮಹಿಳಾ ಸಂಘಗಳ ಸದಸ್ಯೆಯರ ಉಳಿತಾಯ ಹಣ ಕಟ್ಟಿಸಿಕೊಳ್ಳಲಾಗಿದೆ. ಅವರು ಈಗ ಸಂಕಷ್ಟ ಎದುರಿಸುತ್ತಿದ್ದಾರೆ. ರೈತರು ಹಾಗೂ ಮಹಿಳಾ ಸಂಘದ ಸದಸ್ಯೆಯರಿಗೆ ನ್ಯಾಯ ದೊರಕಿಸಿ ಕೊಡಬೇಕು ಎಂದು ಆಗ್ರಹಿಸಿದರು.
ಕಾರ್ಯನಿರ್ವಣಾಧಿಕಾರಿ ಪರಮೇಶ್ವರಪ್ಪ ಅವರನ್ನು ಬಂಧಿಸಿ ಆಸ್ತಿ-ಪಾಸ್ತಿಗಳನ್ನು ಮುಟ್ಟು ಗೋಲು ಹಾಕಿಕೊಂಡು ರೈತರ ಸಾಲದ ಹಣ, ಮಹಿಳಾ ಸ್ವಸಹಾಯ ಸಂಘದ ಉಳಿತಾಯದ ಹಣ, ಸಣ್ಣ ವ್ಯಾಪಾರಸ್ಥರ ಠೇವಣಿ ಹಣ ಮತ್ತು ಬಾಂಡ್ ಹಣವನ್ನು ವಾಪಸ್ ಮಾಡಬೇಕು ಎಂದು ಒತ್ತಾಯಿಸಿದರು.
ಈ ಸಂದರ್ಭದಲ್ಲಿ ಮುಖಂಡರಾದ ಗುಡಿಹಳ್ಳಿ ಹಾಲೇಶ, ಪಿ. ಸಿದ್ದನಗೌಡ, ಶಂಭುಲಿಂಗನಗೌಡ, ಎಂ. ಹೆಗ್ಗಪ್ಪ ವೈ. ಕೊಟ್ರೇಶ್, ಆನಂದಗೌಡ್ರು, ಎಂ. ಮೈಲಪ್ಪ, ಚೌಡಪ್ಪ, ಎಸ್. ನಾಗರಾಜ, ಎ.ಎಂ. ಶಿವಯೋಗಯ್ಯ, ಬಿ. ಕೊಟ್ರೇಶ್, ಟಿ. ಪ್ರಕಾಶ್, ಪಿ. ಆನಂದಗೌಡ, ಎಂ. ಬಸವರಾಜಗೌಡ, ಟಿ.ಎಸ್. ನಾಗಭೂಷಣ, ಟಿ.ಎಂ. ನಾಗಭೂಷಣ, ಕೆ. ವಾಗೀಶ. ಟಿ. ಎಸ್. ವಾಗೀಶ, ಎ. ನಾಗರಾಜ, ಎಂ. ಮಂಜಪ್ಪ, ಎಸ್. ಮಂಜುನಾಥ, ವೆಂಕಟೇಶ ನಾಯ್ಕ, ಮರಿಯಪ್ಪ, ಡಿ.ಕೆ. ಆನಂದ ಸೇರಿದಂತೆ ಇತರರಿದ್ದರು
**ವರದಿ ಹಲಗಿ ಸುರೇಶ**

## ಚಿನ್ನ ಹಗರಿ ನದಿಗೆ ಬಾಗಿನ ಅರ್ಪಣೆ ಮಾಡಿದ ಗ್ರಾಮ ಪಂಚಾಯತಿ ಅಧ್ಯಕ್ಷರು ಗ್ರಾಮಸ್ಥರು

● ವಾರ್ತಾಲೋಕ ವಾರ್ತೆ



**ಕೂಡ್ಲಿಗಿ: ಅ12.** ಈ ವರ್ಷ ತಾಲೂಕಿನಲ್ಲಿ ಉತ್ತಮ ಮಳೆ ಹಿನ್ನೆಲೆ ಸತತ ಮೂರು-ನಾಲ್ಕು ಬಾರಿ ತುಂಬಿ ಹರಿದ ಚಿನ್ನ ಹಗರಿ ನದಿಗೆ ಗ್ರಾ.ಪಂ ಅಧ್ಯಕ್ಷ ರಾಮಚಂದ್ರಪ್ಪ ನೇತೃತ್ವದಲ್ಲಿ ಕುಟುಂಬಸ್ಥರು ಹಾಗೂ ಊರಿನ ಮುಖಂಡರು, ಗ್ರಾಮಸ್ಥರು ಬಾಗಿನ ಅರ್ಪಿಸಿದರು.
ತಾಲ್ಲೂಕಿನ ಹೂಡೇಂ ಗ್ರಾಮದಲ್ಲಿ ಹರಿಯುತ್ತಿರುವ ಗಡಿ ಗ್ರಾಮಗಳ ಜೀವನಾಡಿಯಾಗಿರುವ ಚಿನ್ನ ಹಗರಿ ಉಪನದಿ ಮಳೆಯಿಲದ ಸುಮಾರು ವರ್ಷಗಳಿಂದ ಬತ್ತಿ ಹೋಗಿತು ಈ ವರ್ಷವೂ ಉತ್ತಮ ಮಳೆಯಿಂದ ಮೂರ್ನಾಲ್ಕು ಬಾರಿ ಚಿನ್ನ ಹಗರಿ ನಂದಿ ತುಂಬಿದೇ. ಚಿತ್ರದುರ್ಗ, ದಾವಣಗೆರೆ, ಜಗಲೂರು, ಚಳ್ಳಕೆರೆ, ಕೂಡ್ಲಿಗಿ ತಾಲೂಕಿನ ಮೂಲಕ ಹರಿಯುವ ಚಿನ್ನ ಹಗರಿ (ಜಿನಗಿಹಳ್ಳವು) ಸಾಂಸ್ಕೃತಿಕವಾಗಿ ಮಹತ್ವ ಪಡೆದಿದೆ. ಇದನ್ನು ಚಿನ್ನಹಗರಿ, ಚಿಕ್ಕಹಗರಿ, ಸಣ್ಣ ಹಗರಿ, ಜಿನಗಿಹಳ್ಳ ಎಂದು ನಾನಾ ರೀತಿಯಲ್ಲಿ ಕರೆಯುವುದುಂಟು. ಸುಮಾರು 300 ಕಿ.ಮೀ ದೂರ ಹರಿಯುವ ನದಿಯಾಗಿದೆ. ಈ ನದಿಯು ಆಂಧ್ರಪ್ರದೇಶಕ್ಕೆ ಹರಿದು ಹೋಗುತ್ತದೆ.
ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ರಾಮಚಂದ್ರಪ್ಪ ಬಾಗಿನ ಅರ್ಪಿಸಿ ಪೂಜೆ ಸಲ್ಲಿಸಿ ನಂತರ ಮಾತನಾಡಿದ ಅವರು ಗಡಿ ಗ್ರಾಮಗಳ ಜೀವನಾಡಿಯಾಗಿರುವ ಚಿನ್ನ ಹಗರಿ ಹಳ್ಳವು ಸತತ ಮೂರು ನಾಲ್ಕು ಬಾರಿ ಭರ್ತಿಯಾಗಿ ಹ'ರಿಂು'ುತ್ತಿರ'ುವು'ದ'ು ಗ್ರಾಮದ ರೈತರು ಸೇರಿದಂತೆ ಎಲ್ಲಾಜನರಿಗೂ ಸಂತಸ ತಂದಿದೆ. ಜಲಸಮೃದ್ಧಿ ಗ್ರಾಮದ ಜನರ ಹಲವು ರೀತಿಯ ಭವನೆಗಳನ್ನು ದೂರ ಮಾಡಿದೆ. ಈ ಹಿನ್ನೆಲೆಯಲ್ಲಿ ನದಿಗೆ ಬಾಗಿನ ಅರ್ಪಿಸಲಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.
ಈ ಸಂದರ್ಭದಲ್ಲಿ ಊರಿನ ಮುಖಂಡರಾ ಜರಗು ಬೋರಯ್ಯ, ಪರುವಯ್ಯ, ಬಗಲರ್ ಪಾಪಣ್ಣ, ಜಿ ಬೋಸಯ್ಯ, ಗ್ರಾ.ಪಂ ಸದಸ್ಯರಾದ ಸುಂದರಮ್ಮ ಮಲ್ಲಿಕಾರ್ಜುನ, ಶಶಿಕಲಾ ಜಯಣ್ಣ, ಹಾಗೂ ಮಲ್ಲಿಕಾರ್ಜುನ ರೆಡ್ಡಿ, ಬಂಗಾರಯ್ಯ, ಸಣ್ಣ ಈರಣ್ಣ, ಹೂಡೇಂ ಶ್ರೀ ಸಿದ್ದೇಶ್ವರ ಮಠದ ಹಿರಿಯ ಅರ್ಚಕರಾದ ಸಿದ್ದಲಿಂಗ ಸ್ವಾಮಿ, ಸುರೇಶ್ ಸೇರಿದಂತೆ ಮಹಿಳೆಯರು, ಮಕ್ಕಳು, ಸಾರ್ವಜನಿಕರು ಉಪಸ್ಥಿತರಿದ್ದರು.
ವರದಿ ಹೆಚ್ಚು ವೀರಣ್ಣ.

## ರಾತ್ರಿ ಸುರಿದ ಭಾರಿ ಮಳೆಯಿಂದ ಕೂಡ್ಲಿಗಿ ಪಟ್ಟಣದ ಮನೆಗಳಿಗೆ ನುಗ್ಗಿದ ನೀರು ಸ್ಥಳಕ್ಕೆ ಕಾವಲಿ ಶಿವಪ್ಪ ನಾಯಕ ಭೇಟಿ



● ವಾರ್ತಾಲೋಕ ವಾರ್ತೆ



**ಕೂಡ್ಲಿಗಿ: ಅ12.** ರಾತ್ರಿ ಸುರಿದ ಬಾರಿ ಮಳೆಯಿಂದ ಕೂಡ್ಲಿಗಿ ಪಟ್ಟಣದ ದೊಡ್ಡ ಕೆರೆ ಈಗಾಗಲೇ ತುಂಬಿ ತುಳುಕಿದ್ದು ಕೆರೆ ಕೋಟಿಬಿದ್ದು ಜಲಧಾರೆ ಹರಿಯುತ್ತಿದ್ದು ಯಥೇಚ್ಛವಾಗಿ ನೀರಿನ ಪ್ರಮಾಣ ಹೆಚ್ಚುತ್ತಿರುವುದರಿಂದ ರಾತ್ರಿ ಇಡೀ ಸುರಿದ ಮಳೆಯಿಂದ ನೀರು ವರ ಬರುತ್ತಿದ್ದು ಹೆಚ್ಚು ಪ್ರಮಾಣದ ನೀರು ಕಾಲುವೆಗಳಿಂದ ಅರಿಯುತ್ತಿದ್ದು ಆದರೆ ದೊಡ್ಡ ಪ್ರಮಾಣದ ನೀರು ಹೆಚ್ಚಾಗಿ ಹರಿದು ಕೂಡ್ಲಿಗಿ ಪಟ್ಟಣದ ವಾಸದ ಮನೆಗಳಿಗೆ ನುಗ್ಗಿ ಅವಾಂತರ ಮಾಡಿದ್ದು ಜನಜೀವನ ಅಸ್ತವ್ಯಸ್ತವಾಗಿದೆ ಇದರಿಂದ ವಿಷಯ ತಿಳಿದ ಕೂಡ್ಲಿಗಿ ಪಟ್ಟಣ ಪಂಚಾಯತಿ ಅಧ್ಯಕ್ಷರಾದ ಕಾವಲಿ ಶಿವಪ್ಪ ನಾಯಕ ಮತ್ತು ಸದಸ್ಯರು ಪಟ್ಟಣ ಪಂಚಾಯತಿ ಸಿಬ್ಬಂದಿಗಳು ಸ್ಥಳಕ್ಕೆ ದಾವಿಸಿ ಪರಿಶೀಲಿಸಿದರು ನಂತರ ನೀರನ್ನು ತಡೆಯಲು ಕ್ರಮ ಕೈಗೊಳ್ಳಲು ಸಿಬ್ಬಂದಿಗಳಿಗೆ ಸಲಹೆ ನೀಡಿದರು ಆದರೂ ರಾತ್ರಿ ಇಡಿ ಸುರಿದ ಮಳೆಯಿಂದ ಕೂಡ್ಲಿಗಿ ಪಟ್ಟಣದ ಅನೇಕ ಸ್ಥಳಗಳಲ್ಲಿ ನುಗ್ಗಿ ವಾಸವಿರುವ ಜನರ ನಿದ್ದೆಗೆಡಿಸಿದ್ದು ಭಯಭೀತರನ್ನಾಗಿ ಮಾಡಿದೆ ಆದ್ದರಿಂದ ಜನರ ಸುರಕ್ಷತೆಗಾಗಿ ಮುಂಜಾಗ್ರತೆ ಕ್ರಮ ಕೈಗೊಳ್ಳಬೇಕೆಂದು ಕೂಡ್ಲಿಗಿ ನಾಗರಿಕರು ಸಂಬಂಧಪಟ್ಟವರಿಗೆ ಮನವಿ ಮಾಡಿದ್ದಾರೆ ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಸದಸ್ಯರಾದ ತಳಾಸ ವೆಂಕಟೇಶ್ ಮುಖಂಡರಾದ ಗ್ಯಾಸ್ ವೆಂಕಟೇಶ್ ದುರ್ಗಪ್ಪ ಹನುಮಂತಪ್ಪ ಇನ್ನು ಮುಂತಾದವರು ಉಪಸ್ಥಿತರಿದ್ದರು.
ವರದಿ ಎಚ್ ವೀರಣ್ಣ.

# ಗಂಡಬೊಮ್ಮನಹಳ್ಳಿ ಸೆಲ್ಫಿ ತೆಗೆಯಲು ಹೋಗಿ ಯುವಕ ಸಾವು..!

● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ : ಅ12.** ಸೆಲ್ಫಿ ಫೋಟೋ ತೆಗೆಯಲು ಹೋಗಿ ಗಂಡಬೊಮ್ಮನಹಳ್ಳಿ ಕೆರೆಯಲ್ಲಿ ಬಿದ್ದು ಯುವಕನೊಬ್ಬ ಮೃತಪಟ್ಟ ಘಟನೆ ಶುಕ್ರವಾರ ನಡೆದಿದೆ. ಮೃತ ವ್ಯಕ್ತಿಯನ್ನು ಕೂಡ್ಲಿಗಿ ತಾಲೂಕಿನ ಕೆ.ದಿಬ್ಬದಹಳ್ಳಿ ಗ್ರಾಮದ ಗ್ರಾ ಪಂ ಸದಸ್ಯ ಪಾಲಯ್ಯ ನವರ ಮಗ ಚೇತನ್ ಕುಮಾರ್ (21) ಎಂದು ತಿಳಿದು ಬಂದಿದೆ. ಈತ ತನ್ನ ಕುಟುಂಬದವರ ಜೊತೆ ಕೋಡಿ ಬಿದ್ದ ಕೆರೆಯನ್ನು ನೋಡಲು ತೆರಳಿದಾಗ ಇಬ್ಬರು ಸ್ನೇಹಿತರೊಂದಿಗೆ ತುಂಬಿದ ಕೆರೆ ಕೋಡಿ ಬಳಿ ಫೋಟೋ ತೆಗೆದುಕೊಳ್ಳಲು ಹೋದಾಗ ಅಕಸ್ಮಾತ್ ಕಾಲು ಜಾರಿ ಚೇತನ್ ಕುಮಾರ್ ಕೆಳಗಡೆ ಬಿದ್ದಿದ್ದಾನೆ. ಆತನನ್ನು ಉಳಿಸಿಕೊಳ್ಳಲು ಅಲ್ಲಿರುವವರು ಪ್ರಯತ್ನ ಮಾಡಿದರೂ ಸಹ ಏನು ಪ್ರಯೋಜನವಾಗಿಲ್ಲ ನೀರಿನ ರಭಸಕ್ಕೆ ಸಿಲುಕಿ ಮೃತಪಟ್ಟಿದ್ದಾನೆ.

*ಸೆಲ್ಫಿ ಹುಚ್ಚಿಗೆ ಯುವ ಜನತೆ ಬದುಕು ಬಲಿ!?*

ಇತ್ತೀಚೆಗೆ ಸೆಲ್ಫಿ ಹಾಗೂ ಇನ್ಸ್ಟಾಗ್ರಾಮ್ ವಿಡಿಯೋಗಾಗಿ ಯುವಜನತೆ ಹುಚ್ಚಾಟ ಆಡುವ ಘಟನೆ ಪ್ರತಿದಿನ ಒಂದಲ್ಲ ಒಂದು ಕಡೆ ದಾಖಲಾಗುತ್ತಿದೆ. ಈ ಬಗ್ಗೆ ಪೋಷಕರು ಹಾಗೂ ಜನತೆ ಎಚ್ಚರಿಕೆ ವಹಿಸಬೇಕಿದೆ.
ಒಂದು ಸೆಲ್ಫಿ ಅಥವಾ ಒಂದು ಇನ್ಸ್ಟಾಗ್ರಾಮ್ ವಿಡಿಯೋ ಬದುಕಲ್ಲ. ಹಾಗಾಗಿ ಈ ಬಗ್ಗೆ ಪೋಷಕರು, ಪೊಲೀಸ್ ಇಲಾಖೆ ಹಾಗೂ ಇತರ ಸಂಘ ಸಂಸ್ಥೆಗಳು ಜಾಗೃತಿ ಮೂಡಿಸಬೇಕಿದೆ.
ಕೆರೆ ಕಟ್ಟೆ ಹಳ್ಳ ಪ್ರದೇಶಗಳಲ್ಲಿ ಬೆಟ್ಟ ಗುಡ್ಡಗಳಲ್ಲಿ ಸೆಲ್ಫಿ ತೆಗೆಯುವ ಹುಚ್ಚು ಇತ್ತೀಚಿಗೆ ಇನ್ನಷ್ಟು ಹೆಚ್ಚಾಗುತ್ತಿದ್ದು, ಇದರಿಂದಾಗಿ ಜೀವ ಜೀವನ ಎರಡು ಹಾಳಾಗುತ್ತಿದೆ. ಇದಕ್ಕೆ ಈ ಘಟನೆ ಸಾಕ್ಷಿಯಾಗಿದೆ.

*ಶಾಸಕರು ಮುಖಂಡರು ಬೇಟಿ ಸಾಂತ್ವನ.*

ವಿಷಯ ತಿಳಿಯುತ್ತಿದ್ದಂತೆ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಶಾಸಕ




ಡಾ.ಎನ್.ಟಿ.ಶ್ರೀನಿವಾಸ್, ರವರು ರಾತ್ರಿ ಕೆ.ದಿಬ್ಬದಹಳ್ಳಿ ಗ್ರಾಮಕ್ಕೆ ಮೃತ ಕುಟುಂಬಕ್ಕೆ ದೈರ್ಯ ತುಂಬಿ ಸಾಂತ್ವನ



ಹೇಳಿ ಸಮಾಧಾನ ಹೇಳಿ ಈ ಕೂಡಲೇ ಸರ್ಕಾರದಿಂದ ಬರುವ ಪರಿಹಾರವನ್ನು ಒದಗಿಸಿ ಕೊಡುವುದಾಗಿ ತಿಳಿಸಿದರು. ಇತ್ತೀಚೆಗೆ ಕುಮತಿ ಗ್ರಾಮದಲ್ಲಿ ತುಂಬಿದ ಚಿನ್ನಹಗರಿ ಹಳ್ಳದಲ್ಲಿ ಈಜಲು ಹೋಗಿ 3 ಮಕ್ಕಳು ಸಾವನ್ನಪ್ಪಿರುವ ಘಟನೆ ಮಾಸುವ ಮುನ್ನವೇ ಈ ಘಟನೆ ನಡೆದಿರುವುದು ಮನಸ್ಸಿಗೆ ತುಂಬಾ ದುಃಖವಾಗಿದೆ ಎಂದರು.ತಾಲೂಕಿನಲ್ಲಿ ಉತ್ತಮ ಮಳೆಯಾಗಿದ್ದು,ಕೆರೆ, ಕಟ್ಟೆ, ಹಳ್ಳಗಳು ಮೈತುಂಬಿ ಹರಿಯುತ್ತಿರುವುದರಿಂದ ಸಾರ್ವಜನಿಕರು,ತಮ್ಮ ತಮ್ಮ ಮಕ್ಕಳನ್ನು, ಹೆಣ್ಣುಮಕ್ಕಳು ಬಟ್ಟೆ ಒಗೆಯಲು, ಇತರೆ ಕೆಲಸಗಳಿಗೆ ಹೋಗುವ ಮುನ್ನ ಮುನ್ನೆಚ್ಚರಿಕೆಯಿಂದರಬೇಕು. ಹಾಗೆ ಹರಿಯುವ ನೀರಿನ ಸಮೀಪಕ್ಕೆ ಯಾರು ಸಹ ಹೋಗಬಾರದು ಎಂದು ತಾಲೂಕಿನ ಜನತೆಗೆ ಶಾಸಕರು ಮನವಿ ಮಾಡಿದರು.
ಈ ವೇಳೆ ಗ್ರಾ ಪಂ ಅಧ್ಯಕ್ಷೆ ಓಬಮ್ಮ, ಉಪಾಧ್ಯಕ್ಷ ಆರ್.ಬಸವರಾಜ್,ಮಾಜಿ ತಾಪಂ ಸದಸ್ಯ ರೈಲ್ವೇ ವೆಂಕಟೇಶ್,ಸಣ್ಣ ಚೆನ್ನಪ್ಪ, ದೊಡ್ಡ ಚೆನ್ನಪ್ಪ, ವಕೀಲ ಪಾಪಣ್ಣ,ಗುಂಡಮುಣಗು ಮಂಜಣ್ಣ, ಪೋಲೀಸ್ ಆಂಜನೇಯ,ನಡುವಲಹಳ್ಳಿ ಕುಮಾರಸ್ವಾಮಿ, ಸ್ಥಳಿಯ ಗ್ರಾ ಪಂ ಎಲ್ಲಾ ಸದಸ್ಯರು, ಊರಿನ ಮುಖಂಡರು, ಉಪಸ್ಥಿತರಿದ್ದರು.
**ವರದಿ ಎಚ್ ವೀರಣ್ಣ.**

# ನಡಗರ ಸಂಭ್ರಮದಿಂದ ಕೊಟ್ಟೂರು ಶ್ರೀ ಗುರು ಬಸವೇಶ್ವರ ಸ್ವಾಮಿಯ ಪಲ್ಲಕ್ಕಿ ಉತ್ಸವ

● ವಾರ್ತಾಲೋಕ ವಾರ್ತೆ





**ಕೊಟ್ಟೂರು: ಅ12.** ಶ್ರದ್ಧಾ ಭಕ್ತಿಗಳೊಂದಿಗೆ ಆಚರಣೆಗೊಂಡ ವಿಜಯದಶಮಿ ಹಬ್ಬ ಆರಾಧ್ಯ ದೈವ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಬೆಳ್ಳಿಯ ಪಲ್ಲಕ್ಕಿ ಮಹೋತ್ಸವವದೊಂದಿಗೆ ವೈಭವದಿಂದ ಶನಿವಾರ ಸಂಜೆ ಅಂತಿಮ ತೆರೆಕಂಡಿತು.

ಸದ್ಗುಣ ಮತ್ತು ಕೆಡುಕಿನ ಮೇಲೆ ಒಳಿತಿನ ವಿಜಯವೆಂದು ಸಂಭ್ರಮದಿಂದ ಆಚರಿಸಲಾಗುವ ಹಬ್ಬವೇ ವಿಜಯದಶಮಿ ಅಥವಾ ದಸರಾ. ಈ ವರ್ಷ ನಾಡ ಹಬ್ಬ ದಸರಾವನ್ನು ಅಕ್ಟೋಬರ್ 12 ರಂದು ಆಚರಿಸಲಾಗುವುದು.

ದಸರಾ ನಿಮಿತ್ಯ 2024 ರ ಶುಭ ಮುಹೂರ್ತ, ಪೂಜೆ ವಿಧಾನ, ಮಂತ್ರ ಪಠಣದೊಂದಿಗೆ ನಿತ್ಯ ಪಟ್ಟಣದಲ್ಲಿನ ಕೋಟೆ ಬಾಗದ ಊರಮ್ಮನ ದೇವಸ್ಥಾನ, ಕಾಳಮ್ಮದೇವಿ ದೇವಸ್ಥಾನ, ಬನಶಂಕರಿ, ನೇಕಾರ ಕಾಲೋನಿಯ ಚೌಡೇಶ್ವರಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಶ್ರೀರಾಮ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ದಿನಂಪ್ರತಿ ವಿವಿಧ ಬಗೆಯ ಅಲಂಕಾರ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಿರಂತರ ಸಾಗಿದ್ದವು.

ಕೊನೆಯ ದಿನವಾದ ಶನಿವಾರ ರಂದು ದಸರಾ ಹಬ್ಬದ ಅಂಗವಾಗಿ ಶ್ರೀ ಗುರು ಬಸವೇಶ್ವರ ಸ್ವಾಮಿಯ ಬೆಳ್ಳಿ ಪಲ್ಲಕ್ಕಿ ಮಹೋತ್ಸವ ವಿಜೃಂಭಣೆಯಿಂದ ಸಾಗಿತು. ಅಕ್ಬರ್ ಬಾದುಷಹ ನೀಡಿದ್ದ ಖಡ್ಗವನ್ನು ಪಲ್ಲಕ್ಕಿಯಲ್ಲಿ ಇರಿಸಲಾಗಿತ್ತು. ಕ್ರಿಯಾಮೂರ್ತಿಗಳಾದ ಆರ್.ಎಂ.ಪ್ರಕಾಶ್ ಸ್ವಾಮಿ ಕೊಟ್ಟೂರು ದೇವರು ನೇತೃತ್ವದಲ್ಲಿ ಪಲ್ಲಕ್ಕಿ ಉತ್ಸವ ಹಿರೇಮಠದಿಂದ ಮಂಗಳವಾರ ಸಂಜೆ 4.30ಕ್ಕೆ ಆರಂಭಗೊಂಡಿತು.

ಈ ದಸರಾ ಮಹೊತ್ಸವ ತೇರು ಬಜಾರ್ ಮೂಲಕ ಸಾಗಿ ಹ್ಯಾಳ್ಯಾ ರಸ್ತೆಯಲ್ಲಿನ ಬನ್ನಿಕಟ್ಟೆಗೆ ತಲುಪಿ

ಬನ್ನಿ ಮಹಾಕಾಳಿ ದೇವತೆಗೆ ಪೂಜೆಯು ನೆರವೇರಿಸಿ

ಸಾವಿರಾರು ಭಕ್ತರು ಪಲ್ಲಕ್ಕಿಯಲ್ಲಿರುವ ಶ್ರೀ ಗುರು ಬಸವೇಶ್ವರ ಸ್ವಾಮಿಯ ದರ್ಶನ ಪಡೆದು ಬನ್ನಿ ತೆಗೆದುಕೊಂಡು ದಸರಾ ಹಬ್ಬಕ್ಕೆ ಮೆರುಗು ಮೂಡಿತು.

ದಸರಾ ಹಬ್ಬದ ಸ್ವಾಮಿಯ ಮಹೋತ್ಸವವದುದ್ದಕ್ಕೂ ಸಮಳ, ನಂದಿಕೋಲು ಮತ್ತಿತರ ವಾದ್ಯಗಳ ನೀನಾದ ಅದ್ದೂರಿಯ ಈ ಮೆರವಣಿಗೆಗೆ ಮತ್ತಷ್ಟು ಮೆರಗು ನೀಡಿತು. ಬನ್ನಿ ಕಟ್ಟೆಗೆ ಸಂಜೆ 5.ರ ಸುಮಾರಿನಲ್ಲಿ ಧಾರ್ಮಿಕ ವಿಧಿ ವಿಧಾನದೊಂದಿಗೆ ಆಗಮಿಸುತ್ತಿದ್ದಂತೆ ನೆರೆದಿದ್ದ ಭಕ್ತ ಸಮೂಹ ಶ್ರೀ ಸ್ವಾಮಿಗೆ ಜೈಕಾರಗಳನ್ನು ಹಾಕಿ ನಮಿಸಿದರು.

ಕೊಟ್ಟೂರು ದೈವಸ್ತರ ಪರವಾಗಿ ಸಂಪ್ರದಾಯದಂತೆ ಬನ್ನಿ ಮಹಾಕಾಳಿ ದೇವತೆಗೆ ಕುಂಕುಮ, ಅಕ್ಷತೆ, ಪುಷ್ಪ, ಫಲತಾಂಬುಲಗಳೊದಿಗೆ ದೇವಸ್ಥಾನದ ಬಳಗ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಬನ್ನಿಮಹಾಕಾಳಿಗೆ ಒಕ್ಕಣಿಯ ಪತ್ರ ಬರೆದು ಪಟ್ಟಣದ ಜನತೆಯ ಕಾಣಿಕೆಯನ್ನು ಸ್ವೀಕರಿಸಿ ಸರ್ವರಿಗೂ ಒಳಿತು ಮಾಡುವಂತೆ ಕೋರಿ ಬರೆದ ಪತ್ರವನ್ನು ಶ್ಯಾನುಭೋಗರು ಈ ಸಂದರ್ಭದಲ್ಲಿ ಓದಿ ಮರಕ್ಕೆ ಕಟ್ಟಿದರು. ಈ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಬನ್ನಿ ವಿತರಿಸುವ ಧಾರ್ಮಿಕ ಕಾರ್ಯಕ್ರಮ ಆರಂಭಗೊಂಡಿತು.

ವರದಿ ಪರಶುರಾಮ್.

# ಬೆಳಗ್ಗೆನಿಂದ ಶರನ್ನವರಾತ್ರಿ ಜಗನ್ಮಾತೆ ಮಹಾಮಾಯ ದೇವಿಗೆ ವಿಶೇಷ ಪೂಜೆ ಪಲ್ಲಕ್ಕಿ ಉತ್ಸವ

● ವಾರ್ತಾಲೋಕ ವಾರ್ತೆ



**ಕೊಪ್ಪಳ: ಅ12.** ಬೆಳಗ್ಗೆನಿಂದ ವಿಶೇಷ ಪೂಜೆ ಪಲ್ಲಕ್ಕಿ ಉತ್ಸವ ಕೊಪ್ಪಳ ಜಿಲ್ಲೆಯ ಕುಕನೂರು ಪಟ್ಟಣದ ಮಹಾಮಾಯ ದೇವಸ್ಥಾನದಲ್ಲಿ ಶರನ್ನವರಾತ್ರಿ ಅಂಗವಾಗಿ ಅ 11 ರಂದು ಸಾಯಂಕಾಲ 4 ಗಂಟೆಗೆ ಜರುಗುವ ರಥೋತ್ಸವಕ್ಕೆ ಎಲ್ಲಾ ಸಿದ್ಧತೆ ನಡೆಯುತ್ತಿದ್ದು

ಇನ್ನೇನು ಕ್ಷಣಗಣನೆ ಆರಂಭವಾಗಿದೆ ಬೆಳಗ್ಗೆಯಿಂದ ಮಹಾಮಾಯ ದೇವಸ್ಥಾನದಲ್ಲಿ ವಿಶೇಷ ಅಭಿಷೇಕ ಪೂಜಾ ವಿಧಿ ವಿಧಾನಗಳು ನೆರೆವೇರುತ್ತವೆ

ಮಹಾಮಾಯ ದೇವಸ್ಥಾನದಿಂದ ಪಾದಗಟ್ಟೆವರೆಗೂ ಮಹಾಮಾಯದೇವಿಯ ಪಲ್ಲಕ್ಕಿ ಸೇವೆ ಹಾಗೂ ರಥೋತ್ಸವ ಪೂಜಾ ವಿಧಾನಗಳು ಜರುಗುತ್ತಿದ್ದು

ರಥೋತ್ಸವಕ್ಕೆ ಪಟ್ಟಣದ ಹಿಂದೂ ಮಹಾ ಮಂಡಳಿಯಿಂದ ರುದ್ರಾಕ್ಷಿ ಮಾಲೆಯನ್ನು ರಥೋತ್ಸವಕ್ಕೆ ಅರ್ಪಿಸಲಾಯಿತು ರಥೋತ್ಸವಕ್ಕೆ ನಾಡಿನ ಹಲವಾರು ಭಾಗಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರ ಆಗಮಿಸುತ್ತಿರುವುದು ಕಂಡುಬಂತು

ಹೊಸಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತಾದಿಗಳಿಗೆ ಉಪಹಾರ ಮತ್ತು ಕುಡಿಯುವ ನೀರು ವ್ಯವಸ್ಥೆ ಭಕ್ತರಿಗೆ ತಂಗಲು ವ್ಯವಸ್ಥೆಯನ್ನು ದೇವಸ್ಥಾನ ಮಂಡಳಿಯವರು ಅಚ್ಚುಕಟ್ಟಾಗಿ ನೆರವೇರಿಸುತ್ತಿರುವದನ್ನು ಶಿಗ್ಗಾಂವ ಭಕ್ತರು ಸ್ಮರಿಸೀದ್ದಲದೇ ವಿಶೇಷವಾಗಿ ಗ್ರಾಮದವರು ಸಹಕಾರ ಹಾಗೂ ಪೊಲೀಸ್ ಇಲಾಖೆಯವರು ದೇವಸ್ಥಾನದವರೆಗೆ ಯಾವುದೇ ವಾಹನಗಳನ್ನು ಬಿಡದೆ ನಿಷೇಧ ಪಡಿಸಿದ್ದು ಭಕ್ತಾದಿಗಳ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಿದ್ದಾರೆ ಎಂದರು

ಐತಿಹಾಸಿಕ ಸುಪ್ರಸಿದ್ಧ ಮಹಾ ಮಾಯೆ ದೇವಿಯ ಜಾತ್ರಾ ಮಹೋತ್ಸವವು ಶುಕ್ರವಾರ ಸಂಜೆ 4:00ಗೆ ನೆರೆದ ಸಾವಿರಾರು ಭಕ್ತಾದಿಗಳ ಜಯ ಘೋಷದೊಂದಿಗೆ ಅದ್ದೂರಿಯಾಗಿ ನೆರವೇರಿತು

ಈ ಜಾತ್ರಾ ಮಹೋತ್ಸವಕ್ಕೆ ಧಾರವಾಡ ಹಾವೇರಿ ಶಿಗ್ಗಾವಿ ಹೂವಿನಹಡಗಲಿ ದಾವಣಗೆರೆ ಬೆಂಗಳೂರು ಸಿಂಧನೂರು ಲಿಂಗಸೂರು ಬಿಜಾಪುರ್ ಹುಬ್ಬಳ್ಳಿ ಇಳಕಲ್ ಬಾಗಲಕೋಟೆ ಹಾಗೂ ಕೊಪ್ಪಳ ಜಿಲ್ಲೆಯವರು ಒಂದು ದಿನ ಮೊದಲೇ ಪೂಜೆ ಹಾಗೂ ಜಾತ್ರೆಗೆ ಆಗಮಿಸಿದ್ದರು ಈ ಬಾರಿಯ ರಥೋತ್ಸವದಲ್ಲಿ ಸುಮಾರು 17 ಲಕ್ಷದಲ್ಲಿ ನಿರ್ಮಿಸಿದ ನೂತನ ಬೆಳ್ಳಿ ಪಲ್ಲಕ್ಕಿಯಲ್ಲಿ ಮಹಾಮಾಯದೇವಿಯ ಮೂರ್ತಿ ಮೆರವಣಿಗೆ ಉತ್ಸವಗಳು ಜರುಗಿದವು

ಜಾತ್ರಾ ಮಹೋತ್ಸವಕ್ಕಾಗಿ ಅಲ್ಲಲ್ಲಿ ವಿಶೇಷವಾಗಿ ಕಟ್ಟೆಚ್ಚರ ವಹಿಸುವಂತೆ 30 ರಿಂದ 35 ಪೊಲೀಸ್ ಪೇದೆಗಳು ಹಾಗೂ 20 ರಿಂದ 25 ಗ್ರಹ ರಕ್ಷಕ ದಳ ಸಿಬ್ಬಂದಿಗಳು 10 ಸಂಚಾರಿ ಪೊಲೀಸ್ ಅಧಿಕಾರಿಗಳನ್ನು ಕುಕುನೂರು ಠಾಣಾ ಪಿಐ ಟಿ.ಗುರುರಾಜ ನಿಯೋಜನೆಗೊಳಿಸಿರುವುದಲ್ಲದೆ ದೇವಸ್ಥಾನದಲ್ಲಿ ಎಡಬಿಡದೆ ಅವರು ಸರ್ಪಗಾವಲಾಗಿರುವುದು ಕಂಡುಬಂದಿತು ಮತ್ತು ಸಂಜೆ ಮುಹೂರ್ತದಲ್ಲಿ ತಾಯಿ ಜಗನ್ಮಾತೆಯ ಮಹಾಮಾಯ ದೇವಿಯ ರಥೋತ್ಸವ ಅದ್ದೂರಿಯಾಗಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು

**ವರದಿ ಮಂಗಳೇಶ ಎಸ್ ಮಂಗಳೂರು**

# ನಕಲಿ ಎಸ್.ಟಿ.ಪ್ರಮಾಣ ಪತ್ರ ನೀಡುವುದು ನಿಲ್ಲಿಸಲು ಆಗ್ರಹ

**ಬೀಳಗಿ :** ನಕಲಿ ಎಸ್.ಟಿ. ಜಾತಿ ಪ್ರಮಾಣ ಪತ್ರ ಕೊಡುವುದನ್ನು ನಿಲ್ಲಿಸಬೇಕೆಂದು ಒತ್ತಾಯಿಸಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಸಮಿತಿ ಬೀಳಗಿ ತಾಲೂಕಾ ಘಟಕವತಿಯಿಂದ ಪ್ರಭಾರಿ ತಹಶಿಲ್ದಾರ ಆನಂದ ಕೊಲ್ಹಾರ ಮೂಲಕ ಸರಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಸಮೀತಿ ಬೀಳಗಿ ತಾಲೂಕಾ ಅಧ್ಯಕ್ಷ ಟಿ.ವಾಯ್.ಜಾನಮಟ್ಟಿ ಮಾತನಾಡಿ, ಬಾಗಲಕೋಟೆ

ಜಿಲ್ಲಾಕಾರಿಗಳ 22ನೇ ಅ.2024ರ ಪತ್ರದ ಪ್ರಕಾರ ಮತ್ತು ಭಾರತ ಸರಕಾರದ 19ನೇ ಮಾ.2020ರ ಗೆಜೆಟ್ ಆದೇಶದ ಪ್ರಕಾರ ನಾಯಕಡ, ನಾಯಕ, ಇದಕ್ಕೆ ಪರ್ಯಾಯ ಪದಗಳಾದ ಪರಿವಾರ, ತಳವಾರ ಈ ಜಾತಿಗಳನ್ನು ಮಾತ್ರ ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಗಿದ್ದು ಎಂದು ಸ್ಪಷ್ಟವಾದ ಆದೇಶ ಇದ್ದರೂ ಸಹ ಇವರಿಗೆ ಎಸ್.ಟಿ. ಪ್ರಮಾಣ ಪತ್ರವನ್ನು ನೀಡುವುದು ಬಿಟ್ಟು, ಬೇರೆ ಜಾತಿಗಳಾದ ಗ್ರಾಮೀಣ ಪ್ರದೇಶಗಳಲ್ಲಿ ವೃತ್ತಿಗಳು ಹಾಗೂ ಕಸಬುಗಳ ಮುಖಾಂತರ ಕಬ್ಬಲಿಗ, ಅಂಬಿಗ, ಗಂಗಾಮತಸ್ಥ, ತಳವಾರ, ಕೋಲಕಾರ, ತಳವಾರಿಕೆ ಮಾಡುತ್ತ ಬಂದವರು.

ಇಂಥವರಿಗೆ ಇಲ್ಲಿಯವರೆಗೆ



ಎಸ್.ಟಿ. ಪ್ರಮಾಣಪತ್ರ ನೀಡುತ್ತಿದ್ದು, ಎಸ್.ಟಿ. ಜನಾಂಗಕ್ಕೆ ಸೇರಿದ ಅನ್ಯಾಯವಾಗುತ್ತಿದೆ. ಕಾರಣ ಇದರ ಪರಿಣಾಮದಿಂದ ಮೂಲ ಸಮುದಾಯಕ್ಕೆ ದೊಡ್ಡ ಪ್ರಮಾಣದ ಈಗಾಗಲೇ ತಾವು ನೀಡಿದ ನಕಲಿ ಎಸ್.ಟಿ. ಪ್ರಮಾಣ ಪತ್ರಗಳನ್ನು ಹಿಂದಕ್ಕೆ ಪಡೆದುಕೊಂಡು, ಇಂದಿನಿಂದ ಅಂದರೆ 5ನೇ ಅಕ್ಟೋಬರ್ 2024 ರಿಂದ ಯಾವುದೇ ನಕಲಿ ಜಾತಿ ಪ್ರಮಾಣ ಪತ್ರ ಕೊಡುವುದನ್ನು ನಿಲ್ಲಿಸಬೇಕು. ಇನ್ನು ಮುಂದೆ

ನಕಲಿ ಪ್ರಮಾಣ ಪತ್ರವನ್ನು ಕೊಟ್ಟರೆ ತಾಲೂಕು ಕಛೇರಿಯ ಮುಂದೆ ಉಗ್ರವಾದ ಹೋರಾಟ ಮಾಡಲಾಗುವುದು ಎಂದು ಮನವಿ ಪತ್ರದಲ್ಲಿ

ಎಚ್ಚರಿಸಿದ್ದಾರೆ.

ಪ್ರಭಾರ ತಹಶೀಲ್ದಾರ ಆನಂದ ಕೋಲ್ಹಾರ ಮನವಿಪತ್ರ ಸ್ವೀಕರಿಸಿ ಮಾತನಾಡಿ, ತಮ್ಮ ಮನವಿಯನ್ನು ಜಿಲ್ಲಾಕಾರಿಗಳ ಮೂಲಕ ಸರಕಾರಕ್ಕೆ ರವಾನಿಸುವದಾಗಿ ಭರವಸೆ ನೀಡಿದರು.

ಸಿಂಧೂರ ಲಕ್ಷ್ಮಣ ಟ್ರಸ್ಟ್ ಕಮಿಟಿ ಅಧ್ಯಕ್ಷ ಶಂಕರ ತಳವಾರ, ಜಿಪಂ ಮಾಜಿ ಸದಸ್ಯ ಮಗಿಯಪ್ಪ ದೇವನಾಳ, ನಂದಿ ಶುಗರ್ಸ್ ನಿರ್ದೇಶಕ ಸೋಮನಗೌಡ ಪಾಟೀಲ, ಎಂ.ವೈ. ವಡವಾಣಿ, ಸುರೇಂದ್ರ ನಾಯಿಕ, ಎ.ಆರ್.ಬಿಸನಾಳ, ಭಗವಂತ ಕೂಗಟಿ, ಶ್ರೀಶೈಲ ಅಂಟೀನ, ಆರ್.ಬಿ.ನಾಯ್ಕರ, ಎಸ್.ಎಸ್. ತಳವಾರ, ಹಣಮಂತ ಕಟ್ಟೆಪ್ಪನವರ, ಸಿದ್ದಪ್ಪ ಕೂಗಟಿ, ಸದಾಶಿವ ಜುಂಜೂರಿ, ಪ್ರೇಮಾ ಹಲಗಲಿ, ಶಿವಾನಂದ ಬಿಸನಾಳ, ಪಡಿಯಪ್ಪ ವಾಬಾ, ರಮೇಶ ನಾಯ್ಕರ ಇದ್ದರು.

# ಕಲೆ, ಸಂಸ್ಕೃತಿ ಉಳಿಸಿ ಬೆಳೆಸಲು ಶ್ರಮಿಸಿ



**ಹುನಗುಂದ:** ನಾಗಾಲೋಟದ ಬದುಕಿಗೆ ಒಗ್ಗಿಕೊಂಡು ನಾಡಿನ ಉನ್ನತ ಕಲೆ, ಸಂಸ್ಕೃತಿ ಉಳಿಸಿ ಬೆಳೆಸಲು ಶ್ರಮಿಸಬೇಕೆಂದು ಪುರಸಭೆ ಅಧ್ಯಕ್ಷೆ ಭಾಗಶ್ರೀ ರೇವಡಿ ಹೇಳಿದರು.

ಪಟ್ಟಣದ ವಿದ್ಯಾನಗರ ಪುರಸಭೆ ಮಂಗಲ ಭವನದಲ್ಲಿ ನವರಾತ್ರಿ ಮಹೋತ್ಸವ ನಿಮಿತ್ತ ಹೊನ್ನಗುಂದ ಸಂಸ್ಕೃತಿ ಬಳಗದಿಂದ ಭಾನುವಾರ ಹಮ್ಮಿಕೊಂಡಿದ್ದ ನಾಟಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ರಂಗಕರ್ಮಿಗಳು ಸಮಾಜ ಸುಧಾರಣೆ, ಶಿಕ್ಷಣದ ಅವಶ್ಯಕತೆ, ಹೋರಾಟದ ಜೀವನ, ಯಶಸ್ಸಿನ ಸುಂದರ ಬದುಕು ಹೀಗೆ ಹಲವಾರು ಕ್ಷೇತ್ರಗಳು ನಾಟಕದ ತಿರುಳಿನಿಂದ ಮಾದರಿ ಜೀವನಕ್ಕೆ ಮಾರ್ಗದರ್ಶಗಳಾಗಿವೆ. ಶಿಕ್ಷಣದ ಜತೆಗೆ ನಾಟಕ, ಕಲೆ, ಸಂಸ್ಕೃತಿ, ಸಾಹಿತ್ಯ ಹಾಗೂ ಸಮಸ್ತ ಬದುಕಿನ ಯಶಸ್ಸಿನ ಆಯಾಮಗಳನ್ನು ಮಕ್ಕಳಿಗೆ ಬಾಲ್ಯದಲ್ಲೇಹೇಳಿಕೊಡಬೇಕೆಂದು ತಿಳಿಸಿದರು.

ನಟ ನಿರ್ದೇಶಕ ಮಹಾಂತೇಶ ಗಜೇಂದ್ರಗಡ ಮಾತನಾಡಿ, ಅಖಂಡ ವಿಜಯಪುರ ಜಿಲ್ಲೆಯ ಬಸವನಾಡಿನ ಬಿಳಿಜೋಳದ ನಾಡು ಹುನಗುಂದ ಕಲೆಯ ತವರೂರು. ತಾಲೂಕಿನ ಸೂಳೇಭಾವಿ ಮತ್ತು ಕಮತಗಿಯಲ್ಲಿ ಜಾತ್ರೆ ಹಬ್ಬ ಹರಿದಿನಗಳಲ್ಲಿ ನಾಟಕ ಪ್ರದರ್ಶನ ನಡೆಯುತ್ತಲೇ ಇವೆ. ಪಿ.ಬಿ. ಧುತ್ತರಗಿ, ಧ್ರುವರಾಜ ದೇಶಪಾಂಡೆ, ಟಿ.ಕೆ. ಮಹ್ಮದಾಲಿ ಸೇರಿ ಹಲವರು ಸಾಕಷ್ಟು ನಾಟಕಗಳನ್ನು ಬರೆದು ರಂಗ ಸಜ್ಜಿಕೆಯಲ್ಲಿ ಪಾತ್ರಧಾರಿಗಳಾಗಿ ನಾಟಕ ಕಲೆ ಜೀವಂತವಿ- ರಿಸಿದ್ದಾರೆ. ಹೊನ್ನಗುಂದ ಸಂಸ್ಕೃತಿ ಬಳಗ ಮತ್ತು ಸ್ನೇಹರಂಗದ ಬಳಗದವರು ವರ್ಷದುದ್ದಕ್ಕೂ ರಂಗಕಲಾ ಪ್ರೇಮಿಗಳಿಗೆ ಕಲೆ ಉಣಬಡಿಸುತ್ತ ಬಂದಿದ್ದಾರೆ. ಶಾಲಾ ಕಾಲೇಜು ಮಟ್ಟದಲ್ಲಿ ಶಿಕ್ಷಣದೊಂದಿಗೆ ರಂಗಕಲೆ ಬಗ್ಗೆ ಆಸಕ್ತಿ ತೋರಬೇಕೆಂದರು.

ಹೊಸಬ ತಂಡದ ಸದಸ್ಯ ಸಂಚಾಲಕ ಶಿವಬಸವ ಅಂಗಡಿ ಅಧ್ಯಕ್ಷತೆ ವಹಿಸಿದ್ದರು.

ತಂಡದ ಹಿರಿಯ ಸದಸ್ಯ ಮಹಾಂತೇಶ ಅಗಸಿಮುಂದಿನ ಪ್ರಾಸ್ತಾವಿಕ ಮಾತನಾಡಿದರು. ಪುರಸಭೆ ಉಪಾಧ್ಯಕ್ಷೆ ರಾಜೇಶ್ವರಿ ಬದಾಮಿ, ಉದ್ಯಮಿ ಅಶೋಕ ಭಾವಿಕಟ್ಟಿ, ಶಿಕ್ಷಕ ರಾಯನಗೌಡ ಪಾಟೀಲ, ತಂಡದ ಕೇಶವ ಅವರಾದಿ, ವಾದಿರಾಜ ಗುಡ್ಡದ, ವೀರೇಶ ಕುರ್ತಕೋಟಿ ಉಪಸ್ಥಿತರಿದ್ದರು.

ಐ.ಎಚ್. ನಾಯಕ ನಿರೂಪಿಸಿದರು. ವಿಜಯಕುಮಾರ ಕುಲಕರ್ಣಿ ವಂದಿಸಿದರು. ನಂತರ ಕಾನೂರು ಸುಬ್ಬಮ್ಮ ಹೆಗ್ಗಡಿತಿ ಮತ್ತು ದಾಂಪತ್ಯ ಗೀತ ನಾಟಕ ಪ್ರದರ್ಶನಗೊಂಡಿತು.

# ಸೇವಾ ಭಾರತಿಯಿಂದ ಸಸಿ ನೆಡುವ ಕಾರ್ಯ



**ಬಾಗಲಕೋಟೆ:** ಸೇವಾ ಭಾರತಿ ಟ್ರಸ್ಟಿನ ರಜತ ಮಹೋತ್ಸವದ ಪ್ರಯುಕ್ತ ಮುಚಖಂಡಿ ಗ್ರಾಮದಲ್ಲಿ ಸಸಿಗಳನ್ನು ನೆಡಲಾಯಿತು.

ಬವಿವ ಸಂಘದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಸ್ವತಂತ್ರ ಪದವಿ ಪೂರ್ವ ಕಾಲೇಜು ಎನ್‌ಎಸ್- ಎಸ್ ಘಟಕಗಳ ವಾರ್ಷಿಕ ವಿಶೇಷ ಶಿಬಿರ ನಡೆಯುತ್ತಿದ್ದು, ಅದರ ಸಹಯೋಗದಲ್ಲೇ ಸಸಿಗಳನ್ನು ನೆಡಲಾಯಿತು.

ಕಾರ್ಯಕ್ರಮದಲ್ಲಿ ಸೇವಾ ಭಾರತಿ ರಜತ ಮಹೋತ್ಸವ ಸಮಿತಿ ಅಧ್ಯಕ್ಷ, ಬವಿವ ಸಂಘದ ಶಾಲಾ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಮಹಾಂತೇಶ ಶೆಟ್ಟರ ಅವರು ಭಾಗವಹಿಸಿ ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ. ಅದನ್ನು ಕರ್ತವ್ಯ ಪ್ರಜ್ಞೆಯಾಗಿ ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು.

ರಜತ ಮಹೋತ್ಸವ ಉತ್ತರ ಪ್ರಾಂತದ ಕಾರ್ಯದರ್ಶಿ ಪ್ರೊ. ಎಚ್.ಡಿ.ಪಾಟೀಲ ಅವರು ಮಾತನಾಡಿ, ಜಾಗತಿಕ ತಾಪಮಾನ ಏರಿಕೆಯ ಪರಿಣಾಮ ಒಂದೊಂದಾಗಿ ಗೋಚರಿಸಲು ಶುರುವಾಗಿದೆ. ಮುಂದಿನ ಪೀಳಿಗೆ ಸಂರಕ್ಷಿತ ಬದುಕು ನಡೆಸಬೇಕೆಂದು ನಾವುಗಳು ಪರಿಸರ ಉಳುವಿಗೆ ಈಗಿನಿಂದಲೇ ಆದ್ಯತೆ ನೀಡಬೇಕೆಂದರು. ಸೇವಾ ಭಾರತಿ ಟ್ರಸ್ಟ್ 25 ವರ್ಷದಲ್ಲಿ ಸಾಮಾಜಿಕ,

ಶೈಕ್ಷಣಿಕವಾಗಿ ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಿದ್ದು, ವರ್ಷವಿಡೀ ವಿವಿಧ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಎನ್‌ಎಸ್‌ಎಸ್ ನೋಡಲ್ ಅಧಿಕಾರಿ ಡಾ.ಮಾರುತಿ ಪಾಟೋಳಿ ಅವರು ಮಾತನಾಡಿ, ಎನ್‌ಎಸ್‌ಎಸ್ ಸ್ವಚ್ಛತೆ, ಪರಿಸರಕ್ಕೆ ಆದ್ಯತೆ ನೀಡುವ ಕೆಲಸವನ್ನು ಮಾಡುತ್ತಿದೆ. ಸೇವಾ ಭಾರತಿ ಟ್ರಸ್ಟ್ ಜತೆಗೂಡಿ ಕನಿಷ್ಠ 1 ಸಾವಿರ ಸಸಿಗಳನ್ನು ನೆಟ್ಟು ಅವುಗಳ ಪೋಷಣೆ ಮಾಡಲಿದೆ ಎಂದು ಘೋಷಿಸಿದರು.

ಆರ್‌ಎಸ್‌ಎಸ್‌ನ ನಿಕಟಪೂರ್ವ ಜಿಲ್ಲಾ ಸಂಘಚಾಲಕ ಡಾ. ಸಿ.ಎಸ್.ಪಾಟೀಲ, ಹಿರಿಯ ತಜ್ಞ ಡಾ .ಸುಭಾಸ ಪಾಟೀಲ, ಬವಿವ ಸಂಘದ ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಸಂಗಣ್ಣ ಶಿರೂರ, ಜಿ.ಎಂ. ಅಂಟಿನ, ಪ್ರಭುಸ್ವಾಮಿ ಸರಗಣಾಚಾರಿ, ರೇಣುಕಪ್ಪ , ಎಂ.ಎಸ್.ಮಠ, ಡಾ.ಸಿ. ಎಸ್.ಪಾಟೀಲ, ಮಹಾಂತೇಶ ಬಣಗಾರ್, ಸ್ವಾಗತ ಸಮಿತಿಯ ಕಾರ್ಯದರ್ಶಿ ಡಾ. ಗಂಗಾಧರ ಅಂಗಡಿ , ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿಗ ಎಂ.ಎಚ್.ಕಟಗೇರಿ, ಚಂದ್ರು ಹೂಗಾರ, ವಿದ್ಯಾರ್ಥಿಗಳು ಇದ್ದರು.

# ಕಾಲಮಿತಿಯೊಳಗೆ ಮುಂಬಡ್ತಿಗೆ ಕ್ರಮ ವಹಿಸಿ



**ಬಾಗಲಕೋಟೆ:** ರಾಜ್ಯದ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಽಕಾರಿಗಳ ಹುದ್ದೆಯನ್ನು ಗೆಜೆಟೆಡ್ ಗ್ರೂಪ್ ಬಿ ದರ್ಜೆಗೆ ಉನ್ನತೀಕರಿಸುವುದು ಸೇ- ರಿದಂತೆ ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಽಕಾರಿಗಳು ಮತ್ತು ನೌಕರರ ಎಲ್ಲಾ ವೃಂದ ಸಂಘಗಳು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟದ ನೇತೃತ್ವದಲ್ಲಿ ಮಂಗಳವಾರ ಜಿಲ್ಲಾ ಆಡಳಿತ ಭವನದ ಎದುರು ಪ್ರತಿಭಟನಾ ಧರಣಿಯನ್ನು ಆರಂಭಿಸಿತು.

ಗ್ರೇಡ್-1 ಕಾರ್ಯದರ್ಶಿಗಳ

ವೃಂದದ ಜೇಷ್ಠತಾ ಪಟ್ಟಿಯನ್ನು ತುರ್ತಾಗಿ ಪ್ರಕಟಣೆ ಮಾಡಿ ಪಿಡಿಒ ವೃಂದಕ್ಕೆ ಮುಂಬಡ್ತಿ ನೀಡುವ ಬಗ್ಗೆ ಆಯುಕ್ತರಿಗೆ ಸರ್ಕಾರದ ನಿರ್ದೇಶನವಿದ್ದರೂ ಮುಂಬಡ್ತಿ ನೀಡದೆ ನಿರಾಸಕ್ತಿ ವಹಿಸುತ್ತಿರುವುದು ಸಾವಿರಕ್ಕೂ ಅಽಕ ವಿವಿಧ ವೃಂದದ ನೌಕರರು ಮುಂಬಡ್ತಿಯಿಂದ ವಂಚಿತರಾಗಿದ್ದು, ಕಾಲಮಿತಿಯೊಳಗೆ ಮುಂಬಡ್ತಿಗೆ ಕ್ರಮ ವಹಿಸಬೇಕಾಗಿದೆ. ಕಾರ್ಯದರ್ಶಿ ಗ್ರೇಡ್-1 ವೃಂದದಿಂದ ಪಿಡಿಒ ವೃಂದಕ್ಕೆ ಈಗಿರುವ ಮುಂಬಡ್ತಿ ಅನುಪಾತವನ್ನು ಶೇಕಡ 35 ರಿಂದ 60ಕ್ಕೆ ಹೆಚ್ಚಿಸಬೇಕು. 7 ವರ್ಷ ಒಂದೇ ತಾಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ಜಿಲ್ಲೆಯ ಬೇರೆ ತಾಲೂಕಿಗೆ ವರ್ಗಾಯಿಸುವ ಕರಡು ಅಽಸೂಚನೆಯನ್ನು ಹಿಂಪಡೆಯಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಗ್ರೇಡ್-2 ಕಾರ್ಯದರ್ಶಿ ಹುದ್ದೆಯಿಂದ ಗ್ರೇಡ್-1 ಕಾರ್ಯದರ್ಶಿ ಹುದ್ದೆಗೆ ಕಳೆದ 12 ರಿಂದ 14 ವರ್ಷಗಳ ಕಾಲ ಬಡ್ತಿ ಇಲ್ಲದೆ ಕಾರ್ಯ ನಿರ್ವಹಿಸುತ್ತಿದ್ದು, ಗ್ರೇಡ್-2 ಕಾರ್ಯದರ್ಶಿಗಳಿಗೆ ನೇರ ನೇಮಕಾತಿ ಕೋಟಾದಡಿ ಒಂದು ಬಾರಿ ಏಕಕಾಲದಲ್ಲಿ ಬಡ್ತಿ ನೀಡುವುದು. ಗ್ರೇಡ್-2 ಕಾರ್ಯದರ್ಶಿ ಹುದ್ದೆಯಿಂದ ಗ್ರೇಡ್-1 ಕಾರ್ಯದರ್ಶಿ ಹುದ್ದೆಗೆ ಬಡ್ತಿ ಶೇ.33 ರಷ್ಟಿದ್ದು, ಅದನ್ನು ಶೇ.80ಕ್ಕೆ ಹೆಚ್ಚಿಸಬೇಕು. 5000 ಕ್ಕಿಂತ ಹೆಚ್ಚಿಗೆ ಇರುವ ಗ್ರಾಮ ಪಂಚಾಯಿತಿಗಳನ್ನ ಗ್ರೇಡ್-1 ಪಂಚಾಯಿತಿ ಅಂತಾ ಮೇಲ್ದರ್ಜೆಗೆ ಏರಿಸಬೇಕು ಎಂದು ಆಗ್ರಹಿಸಲಾಗಿದೆ.

ಮುಖಂಡರಾದ ಬಸವರಾಜ ಮುನ್ನೊಳ್ಳಿ, ಹಣಮಂತ ಕರ್ಣಕೋಟೆ, ಗಂಗಾಧರ ಹನಮಸಾಗರ, ಸಿದ್ಧಾರ್ಥ ಗೋಠೆ, ಎಸ್.ಪಿ.ಹಿರೇಮಠ, ಮಹಾಂತೇಶ ನಾಲತವಾಡ, ಎಲ್.ಜಿ.ಶಾಂತಗಿರಿ, ಜಿ.ಎಸ್.ಅರಳಿಕಟ್ಟಿ, ರಾಮಚಂದ್ರ ಮೇತ್ರಿ ಸೇರಿದಂತೆ ಇತರರು ಇದ್ದರು.

# ಸಾಂಸ್ಕೃತಿಕ ಕಾರ್ಯಕ್ರಮ



**ಹುಬ್ಬಳ್ಳಿ, :** ವಿಎಕೆ ಫೌಂಡೇಶನದ ಪ್ರಾಯೋಜಕತೆಯಲ್ಲಿ ಪಂಚ ಟ್ರಸ್ಟ ಕಮಿಟಿ ನೇತೃತ್ವದಲ್ಲಿ ಶ್ರೀದುರ್ಗಾ ಯುವಕ ಮಂಡಳ ಹಾಗೂ ಶ್ರೀಗಜಾನನ ಉತ್ತವ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ದಸರಾ ಹಬ್ಬದ ಪ್ರಯುಕ್ತ ಸಿದ್ದವೀರಪ್ಪನಪೇಟ ಟುಮಕೂರ ಓಣಿಯಲ್ಲಿ ದಾಂಡಿಯಾ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಅಧ್ಯಕ್ಷತೆಯನ್ನು ಮಾಜಿ ಶಾಸಕರಾದ ಅಶೋಕ ಕಾಟವೆ ವಹಿಸಿದ್ದರು.

ಮುಖ್ಯ ಅತಿಥಿಯಾಗಿ ಶಾಸಕರಾದ ಪ್ರಸಾದ ಅಬ್ಬಯ್ಯ, ಮಹೇಶ ತೆಂಗಿನಕಾಯಿ ಆಗಮಿಸಿದ್ದರು.

ಕಮಿಟಿಯ ಅಧ್ಯಕ್ಷರಾದ ವಿಠ್ಠಲ ಜಿ.ಬದ್ದಿ, ಎಂ ಆರ್. ಸೊಳಂಕಿ, ಎಂ.ಎಲ್. ಸೋಳಂಕಿ, ಎಸ್. ಆರ್ ಸೊಳಂಕಿ, ಡಿಕೆ ಚವ್ಹಾಣ, ಶೇಷುಸಾ ಜಿತೂರಿ, ಶ್ರೀಪ್ರಕಾಶ ಖೋಡೆ, ಪಾಲಿಕೆಯ ಸದಸ್ಯರಾದ ಶ್ರೀಮತಿ ಪ್ರೀತಿ ಲದವಾ ಹಾಗೂ ಬಿಜೆಪಿ ಧು- ರೀಣರಾದ ವಿನಾಯಕ ಲದವಾ ಹಾಗೂ ಪ್ರಕಾಶ ಭುರೆಬುರೆ, ವೀರು ಕಠಾರೆ ಹಾಗೂ ಸುಭಾಸ ಭಾಂಡಗೆ ಇವರು ಅತಿಥಿಯಾಗಿ ಆಗಮಿಸಿದ್ದರು.

ಶ್ರೀ ದುರ್ಗಾ ಯುವಕ ಮಂಡಳದ ಗೌರವ ಅಧ್ಯಕ್ಷರಾದ ಗೋಪಾಲ ಅರಸಿದ ಇವರ ಸದಸ್ಯರ ತಂಡದಿಂದ ಕಾರ್ಯಕ್ರಮಕ್ಕೆ ಪ್ರಾಯೋಜಕತೆ ನೀಡಿದ ವಿಎಕೆ ಫೌಂಡೇಶನದ ಅಧ್ಯಕ್ಷರಾದ ವೆಂಕಟೇಶ ಕಾಟವೆ ಇವರಿಗೆ ಸನ್ಮಾನಿಸಲಾಯಿತು.

ಸ್ವಾಗತವನ್ನು ಶ್ರೀನಾಥ ಆರ್. ಪವಾರ್ ಇವರು ಮಾಡಿದರು ಹಾಗೂ ಕಿಟ್ಟು ಲದವಾ ಇವರು ವಂದನಾರ್ಪಣೆ ಸಲ್ಲಿಸಿದರು. ದೀಪಕ ಜಿತೂರಿ, ವೆಂಕಟೇಶ ಇರಕಲ್, ಶ್ರೀಮತಿ ಲಕ್ಷ್ಮೀಬಾಯಿ ಇರಕಲ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಸಚಿವ ಎಂ.ಬಿ. ಪಾಟೀಲ ಹುಟ್ಟು ಹಬ್ಬ ನಿಮಿತ್ತ ರಕ್ತದಾನ ಶಿಬಿರ



**ವಿಜಯಪುರ, :** ರಕ್ತದಾನ ಶ್ರೇಷ್ಠದಾನವಾಗಿದ್ದು, ಕಷ್ಟದಲ್ಲಿರುವವರಿಗೆ ಮರುಜೀವ ನೀಡುತ್ತದೆ ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಸಹಾಯಕ ಕಾನೂನು ಸಲಹೆಗಾರ ಸೂರ್ಯಕಾಂತ ಬಿರಾದಾರ ಹೇಳಿದ್ದಾರೆ.

ಸೋಮವಾರ ನಗರದ ಬಿ.ಎಲ್.ಡಿ.ಇ ಆಸ್ಪತ್ರೆಯ ರಕ್ತ ಭಂಡಾರದಲ್ಲಿ ಶ್ರೀ ಬಿ. ಎಂ. ಪಾಟೀಲ ನರ್ಸಿಂಗ್ ಮಹಾವಿದ್ಯಾಲಯದಲ್ಲಿ ಕೈಗಾ- ರಿಕೆ, ಮೂಲಸೌಲಭ್ಯಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಸಂಸ್ಥೆಯ ಅಧ್ಯಕ್ಷ ಎಂ. ಬಿ. ಪಾಟೀಲ ಅವರ ಜನ್ಮದಿನದ ಅಂಗವಾಗಿ ಆಯೋಜಿಸಲಾಗಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು. ರಕ್ತದಾನದಿಂದ ಕೇವಲ ರೋಗಿಗೆ ಮರುಜೀವ ನೀಡುವುದು ಮಾತ್ರವಲ್ಲ. ದಾನಿಯೂ ಆರೋಗ್ಯದಿಂದ ಇರಲು ಸಹಾಯವಾಗುತ್ತದೆ. ರಕ್ತದಲ್ಲಿರುವ ಕೆಟ್ಟ ಕೊಬ್ಬನ್ನು ಹೊರಗೆ ಹಾಕಲು ಇದು ಸಹಕಾರಿಯಾಗಿದೆ. ಒಬ್ಬ ಆರೋಗ್ಯವಂತ ವ್ಯಕ್ತಿ ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡುವ ಮೂಲಕ ಆರೋಗ್ಯದಿಂದ ಇರಬಹುದಾಗಿದೆ ಎಂದು ಅವರು ಹೇಳಿದರು.

ಈ ಶಿಬಿರದಲ್ಲಿ 20 ಜನರು ರಕ್ತದಾನ ಮಾಡಿದರು.

ಈ ಸಂದರ್ಭದಲ್ಲಿ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ಶಾಲ್ಮೋನ್‌ಚೋಪಡೆ, ಡಾ. ಪ್ರಕಾಶ ಪಾಟೀಲ, ಸಂತೋಷ ಮಸಳಿ, ಚಂದ್ರಕಾಂತ, ಡಾ. ಅಪ್ಪನಗೌಡ ಪಾಟೀಲ, ಡಾ. ಅಮಿತಕುಮಾರ ಬಿರಾದಾರ, ಡಾ. ಸತೀಶ ನಡಗಡ್ಡಿ, ಡಾ. ಸಂಕಪ್ಪ ಗುಲಗಂಜಿ, ಕಿರಣ ಶಿರೋಳಕರ, ನವೀನ ಗಿರಡಿಮಠ, ಶಂಕರ ಬಿರಾದಾರ, ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಕಾಲೇಜು ಸಿಬ್ಬಂದಿ ಉಪಸ್ಥಿತರಿದ್ದರು.

# ಕಾನೂನು ಬಾಹಿರ ವಕ್ಫ್ ಸೊತ್ತೆಂದು ದಾಖಲೆ ಮಾಡಿದ್ದನ್ನು ಕೈಬಿಡಲು ಪಾಲಿಕೆ ಸದಸ್ಯರ ಒತ್ತಾಯ

**ವಿಜಯಪುರ :** ಭಾರತೀಯ ಪುರಾತತ್ವ ಇಲಾಖೆಗೆ, ಮಹಾನಗರ ಪಾಲಿಕೆ ಹಾಗೂ ಕಂದಾಯ ಇಲಾಖೆಗೆ ಸೇರಿರುವ ಆಸ್ತಿಗಳನ್ನು ಕಂದಾಯ ದಾಖಲೆಗಳಲ್ಲಿ ಕಾನೂನು ಬಾಹಿರವಾಗಿ ವಕ್ಫ್ ಸೊತ್ತು ಎಂದು ದಾಖಲಿಸಿದ್ದನ್ನು ತೆರವುಗೊಳಿಸಲು ಒತ್ತಾಯಿಸಿ ವಿಜಯಪುರ ಮಹಾನಗರ ಪಾಲಿಕೆ ಸದಸ್ಯರು ಸೋಮವಾರ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರಿಗೆ ಮನವಿ ಸಲ್ಲಿಸಿದರು.



ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ನಡೆದ ವಿಜಯಪುರ ಜಿಲ್ಲೆಯ ಮುತ್ತಾವಲ್ಲಿಗಳ ಸಮ್ಮೇಳನ ಮತ್ತು ವಕ್ಫ್ ಅದಾಲತ್‌ದಲ್ಲಿ ಭಾಗವಹಿಸಿದ್ದ ಸಚಿವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿ, ನಗರ ಮತ್ತು ವಿಜಯಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಕಾನೂನು ಬಾಹಿರವಾಗಿ ವಕ್ಫ್ ಆಸ್ತಿಯನ್ನಾಗಿ ದಾಖಲು ಮಾಡಿರುವುದನ್ನು ದಾಖಲೆ ಸಹಿತ ಮನವರಿಕೆ ಮಾಡಿ, ವಕ್ಫ್ ಸೊತ್ತು ಮಾಡಿರುವುದನ್ನು ತೆರವುಗೊಳಿಸಲು ಒತ್ತಾಯಿಸಿದರು.

ಅಲ್ಲದೆ, ಇದೀಗ ಜಿಲ್ಲಾಡಳಿತ ತಯಾರಿಸಿದ ಯಾದಿ ಪ್ರಕಾರ ವಿಜಯಪುರ ಜಿಲ್ಲೆಯಾದ್ಯಂತ ಮಹಾನಗರ ಪಾಲಿಕೆ, ಭಾರತೀಯ ಪುರಾತತ್ವ, ಕಂದಾಯ ಇಲಾಖೆಗೆ ಒಳಪಟ್ಟ ಸುಮಾರು 357 ಜಮೀನುಗಳು ವಕ್ಫ್ ಹೆಸ-ರಿನಲ್ಲಿ ದಾಖಲಾಗುವ ಸಂಭವವಿದೆ. ಇಂತಹ ಕಂದಾಯಿಕ ಬದಲಾವಣೆ ಮಾಡಬೇಕಾದರೆ, ನಿಯಮಾನುಸಾರ ಮಾಡಬೇಕಾಗುತ್ತದೆ. ಇತ್ತೀಚಿನ ಕರ್ನಾಟಕ ಉಚ್ಚ ನ್ಯಾಯಾಲಯವು ಸಹ ಚನ್ನಮ್ಮ ಹಿರೇಮಠ ಅವರ ಪ್ರಕರಣ-ಕ್ಕೆ ಸಂಬಂಧಿಸಿದಂತೆ, ಐತಿಹಾಸಿಕ ತೀರ್ಪು ನೀಡಿದೆ. ಈ ತೀರ್ಪಿನ ಪ್ರಕಾರ ಕಂದಾಯ ದಾಖಲೆಗಳಲ್ಲಿ ಬದಲಾವಣೆ ಮಾಡಬೇಕಾದರೆ ಆಸ್ತಿಗೆ ಸಂಬಂಧಪಟ್ಟವರ ಹಾಗೂ ಸ್ಥಾನಿಕ ವಿಚಾರಣೆ ಮಾಡದೇ ಮಾಡುವುದು ಕಾನೂನು ಬದ್ದವಲ್ಲವೆಂದು ಹೇಳಿದೆ. ಹೀಗಾಗಿ ಕಂದಾಯ ದಾಖಲೆಗಳಲ್ಲಿ ಕಾನೂನು ಬಾಹಿರವಾಗಿ ವಕ್ಫ್ ಸೊತ್ತು ಎಂದು ದಾಖಲಿಸುವುದನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

ಮಹಾನಗರ ಪಾಲಿಕೆ ಸದಸ್ಯರಾದ ಪ್ರೇಮಾನಂದ ಬಿರಾದಾರ, ಕಿರಣ ಪಾಟೀಲ, ಜವಾಹಾರ ಗೋಸಾವಿ, ಶಿವರುದ್ರ ಬಾಗಲಕೋಟ, ಮುಖಂಡ ದತ್ತಾ ಗೊಲಂಡೆ ಮತ್ತಿತರರು ಇದ್ದರು.

# ದೇವಸ್ಥಾನಕ್ಕೆ ಕಲ್ಲೆಸೆದ ಆರೋಪಿಗಳನ್ನು ಮಂಪರು ಪರೀಕ್ಷೆಗೆ ಒಳಪಡಿಸಿ: ಶಾಸಕ ಯತ್ನಾಳ ಒತ್ತಾಯ

**ವಿಜಯಪುರ:** ನಗರದ ಗಣಪತಿ ಚೌಕ್‌ದಲ್ಲಿರುವ ಗಣೇಶ ದೇವಸ್ಥಾನದ ಗಾಜಿಗೆ ಕಲ್ಲೆಸೆದಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ಬಂಧಿತ ಆರೋಪಿಗಳನ್ನು ಮಂಪರು ಪರೀಕ್ಷೆಗೆ ಒಳಪಡಿಸಿ, ಈ ಕೃತ್ಯದ ಹಿಂದಿರುವ ಶಕ್ತಿಗಳನ್ನು ಬಯಲಿಗೆ ಎಳೆಯಬೇಕು ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಶಾಂತವಾಗಿರುವ ನಮ್ಮ ವಿಜಯಪುರ ನಗರದಲ್ಲಿ ಶಾಂತಿ ಕದಡಬೇಕು, ಕೋಮು ಗಲಭೆ ಸೃಷ್ಟಿಸಲೆಂದೆ ನಗರದ ಗಣಪತಿ ಚೌಕ್‌ದಲ್ಲಿರುವ ಹಿಂದೂಗಳ ಆರಾಧ್ಯದೈವ ಗಣೇಶ ದೇವಸ್ಥಾನಕ್ಕೆ ಕಲ್ಲೆಸೆದು, ಗಾಜು ಒಡೆದು ಹಾಕುವ ಮೂಲಕ ಹಿಂದೂಗಳ ಭಾವನೆಗೆ ಧಕ್ಕೆ ತರುವ ಕೆಲಸ ಮಾಡಿರುವುದು ಖಂಡನೀಯ ಎಂದಿದ್ದಾರೆ.



ದೇವಸ್ಥಾನಕ್ಕೆ ಕಲ್ಲೆಸೆದ ಆರೋಪಿಗಳು ಅಪ್ರಾಪ್ತರಾಗಿದ್ದರೆ, ಇವರ ಹಿಂದಿನ ಶಕ್ತಿಗಳು ಯಾವವು? ರಾಜಕೀಯ ವ್ಯಕ್ತಿಗಳ ಕೈವಾಡವಿದೆಯೇ? ಗಲಭೆ ಸೃಷ್ಟಿಸುವ ಸಂಘಟನೆಗಳ ಕುಮ್ಮಕ್ಕು ಇದೆಯೇ? ಸತ್ಯ ಹೊರ ಬರಬೇಕೆಂದರೆ, ಬಂಧಿತ ಆರೋಪಿಗಳನ್ನು ಮಂಪರು ಪರೀಕ್ಷೆ ನಡೆಸಬೇಕು. ಇವರ ಸಂಬಂಧಿಗಳು, ಗೆಳೆಯರು ಮತ್ತು ಇವರು ವಾಸಿಸುವ ಟಕ್ಕೆಯಲ್ಲಿ ಯಾರ ಯಾರ ಜೊತೆ ಸಂಪರ್ಕ ಹೊಂದಿದ್ದಾರೋ ಎಲ್ಲರ ಮೊಬೈಲ್ ಕಾಲ್ ತಪಾಸಣೆ ನಡೆಸಬೇಕು. ಯಾರಾದರೂ ನಗರ ತೊರೆದಿದ್ದಾರೆಯೇ? ಎಲ್ಲರನ್ನು ಸಮಗ್ರವಾಗಿ ತನಿಖೆ ಒಳಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ಕೃತ್ಯಯಿಂದ ನಿಷೇಧಿತ ದೇಶದ್ರೋಹಿ ಸಂಘಟನೆಗಳು, ಬಾಂಗ್ಲಾ ನುಸುಳುಕೋರರು, ಸೀಮಿ ಸಂಘಟನೆಗಳು ವಿಜಯಪುರ ನಗರದಲ್ಲಿ ಜೀವಂತವಾಗುತ್ತಿವೆಯೇ? ಎಂಬುದರ ಬಗ್ಗೆಯೂ ತನಿಖೆ ನಡೆಸಬೇಕು. ಆರೋಪಿಗಳು ಗಾಂಜಾ, ಅಫೀಮು ಮತ್ತಿನಲ್ಲಿದ್ದರೆ

ಅಥವಾ ಕುಡಿದ ಅಮಲಿನಲ್ಲಿದ್ದರೆ, ಅಪ್ರಾಪ್ತರು ಅವ್ಯಹತವಾಗಿ ಕುಡಿತದ ಚಟಕ್ಕೆ ಬಿದ್ದಿರುವುದು ಸಂಶಯ ಮೂಡುತ್ತಿದೆ ಎಂದು ಅವರು ಹೇಳಿದ್ದಾರೆ.

ವಿಜಯಪುರ ನಗರದಲ್ಲಿ ಶಾಂತಿ, ನೆಮ್ಮದಿ, ಕಾನೂನು ಸುವ್ಯವಸ್ಥೆ ಕಾಪಾಡಲು ಹಾಗೂ ಮುಂದೆ ಇಂತಹ ದ್ರೋಹಿಗಳಿಂದ ಆಗುವ ಅನಾಹುತ ತಪ್ಪಿಸಲು ಗಣಪತಿ ಚೌಕ್‌ದಲ್ಲಿರುವ ಗಣೇಶ ದೇವಸ್ಥಾನಕ್ಕೆ ಕಲ್ಲೆಸೆದು, ಗಾಜು ಒಡೆದು ಹಾಕಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯಿಸಿದ್ದಾರೆ.

# ಸಾರಾಯಿ ಎಂಬ ಪಾಪದ ಕೊಡವ ದೂರವಿರಿಸಿ

**ಕುಂದಗೋಳ :** ಸಾರಾಯಿ ಎಂಬ ಪಾಪದ ಕೊಡವನ್ನು ದೂರವಿರಿಸಿ, ಸಮಾಜ ಸಂಸ್ಕೃತಿ ಎಂಬ ಪುಣ್ಯದ ಕೊಡವನ್ನು ಉತ್ತಮವಾಗಿ ಬಳಸಿಕೊಳ್ಳುವದೇ ಸಂಸ್ಕಾರವಂತರ ಲಕ್ಷಣ ಎಂದು ಮಾಜಿ ಸಂಸದ ಪ್ರೊ?ರ. ಐ. ಜಿ. ಸನದಿ ಹೇಳಿದರು.



ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಗದಗ ಜಿಲ್ಲೆ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಬೆಳ್ತಂಗಡಿ ಹಾಗೂ ಗದಗ ಜಿಲ್ಲೆ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಆಶ್ರಯದಲ್ಲಿ ಗಾಂಧೀಜಿ ಅವರ,155ನೇ ಜಯಂತಿ ನಿಮಿತ್ತ ನಡೆದ ಗಾಂಧಿ ಸ್ಮರಣೆ ಮತ್ತು ವ್ಯಸನ ಮುಕ್ತರಿಗೆ ಅಭಿನಂದನೆ ಹಾಗೂ ವಿವಿಧ ಕ್ಷೇತ್ರದ ಸಾಧಕರ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ನಮ್ಮ ರಾಷ್ಟ್ರ ಬಡತನ ಮುಕ್ತ ಹಾಗೂ ಹಸಿವು ಮುಕ್ತವಾಗವ ಜೊತೆಗೆ ಸರಾಯಿ ಮುಕ್ತ ರಾಷ್ಟ್ರವಾಗಬೇಕಿರುವುದು ಮುಖ್ಯವಾಗಿದೆ ಎಂದರು.

ಗಾಂಧೀಜಿ ಭಾವಚಿತ್ರಕ್ಕೆ ಪೂಜಿಸಿ, ಪುಷ್ಪಾರ್ಚನೆ ಮಾಡಿದ ಶಾಸಕ ಎಂ. ಆರ್.ಪಾಟೀಲ ಮಾತನಾಡಿ ಗ್ರಾಮಾಭಿವೃದ್ಧಿ ಯೋಜನೆ ರೂಪಿಸಿದ ವೀರೇಂದ್ರ ಹೆಗ್ಗಡೆ ಅವರ ಕಾರ್ಯ ಶ್ಲ್ಯಾಘನೀಯ ಎಂದರು.

ಕಲ್ಯಾಣಪುರ ಮಠದ ಬಸವಣ್ಣಜ್ಜನವರು, ಶಿವಾನಂದ ಮಠದ ಮಹಾಂತ ಶ್ರೀಗಳು ಸಾನಿಧ್ಯ ವಹಿಸಿದ್ದರು.

ಮಾಜಿ ಶಾಸಕರಾದ ಎಸ್. ಐ. ಚಿಕ್ಕನಗೌಡ್ರ, ಎಂ. ಎಸ್. ಅಕ್ಕಿ ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ರಾಜಣ್ಣ ಕೊರವಿ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಗದಗ ಜಿಲ್ಲಾಧ್ಯಕ್ಷ ಶಿವಾನಂದ ಬೆಂತೂರ, ಸಹಕಾರಿ ರತ್ನ ಎ. ಎಂ. ಕಟಗಿ, ಜಗನ್ನಾಥಗೌಡ ಸಿದ್ದನಗೌಡ್ರ, ಎಂಡಬ್ಲ್ಯೂಬಿ ಸೇವಾ ಸಂಸ್ಥೆ ಅಧ್ಯಕ್ಷ ಗೌತಮ್ ಬಾಫಣಾ, ಗದಗ ಜಿಲ್ಲಾ ನಿರ್ದೇಶಕ ಎ. ಯೋಗೀಶ್, ರಾಜೇಶ್ವರಿ, ಜಯಂತ್, ನಿಸಾರಹ್ಮದ, ತಹಶೀಲ್ದಾರ್ ರಾಜು ಮಾವರಕರ ಸೇರಿದಂತೆ ಅನೇಕರಿದ್ದರು.

# ವಿಜಯದಶಮಿ ಉತ್ಸವ: ಆಕರ್ಷಕ ಪಥಸಂಚಲನ

**ಗುಳೇದಗುಡ್ಡ, :** ವಿಜಯದಶಮಿ ಉತ್ಸವದ ಅಂಗವಾಗಿ ನಗರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಘಣವೇಷಧಾರಿ ಸ್ವಯಂಸೇವಕರ ಆಕರ್ಷಕ ಪಥಸಂಚಲನ ನಡೆಯಿತು. ನಗರದ ಭಂಡಾರಿ ಹಾಗೂ ರಾಠಿ ಮಹಾವಿದ್ಯಾಲಯದಿಂದ ಮಧ್ಯಾಹ್ನ ಆರಂಭಗೊಂಡ ಪಥ-'ಸಂಚಲನ ನಗರದ ಕೆಳಗಿನ ಮಾರ್ಕೆಟ್, ಹರದೊಳ್ಳಿ, ಸಾಲೇಶ್ವರ ದೇವಸ್ಥಾನ, ಪವಾರ ಕ್ರಾಸ್, ಪುರಸಭೆ, ಕಂಠಿಪೇಟೆ, ಗಚ್ಚಿನಕಟ್ಟಿ, ಚೌಬಜಾರ, ಅರಳಿಕಟ್ಟಿ, ಗುಗ್ಗರಿ ಪೇಟೆಯ ಮೂಲಕ ಹಾಯ್ದು ಭಂಡಾರಿ ಕಾಲೇಜು ಮೈದಾನ ತಲುಪಿತು.

ಪಥಸಂಚಲನದಲ್ಲಿ ನಗರದ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಅಗಮಿಸಿದ ಗಣವೇಷಧಾರಿ ಸ್ವಯಂಸೇವಕರು, ಘೋಷ ಸಹಿತ ಸಂಚಲನದಲ್ಲಿ ಭಾಗವಹಿಸಿದ್ದರು. ದಾರಿಯುದ್ದಕ್ಕೂ ಸೇರಿದ ಮಹಿಳೆಯರು, ಮಕ್ಕಳು ಹರ್ಷೋದ್ಘಾರದಿಂದ ಪಥ-'ಸಂಚಲವನ್ನು ಸ್ವಾಗತಿಸಿದರು.



ಎಲ್ಲೆಲ್ಲೂ ಕೇಸರಿಮಯ: ಪಥಸಂಚಲ ಸಾಗುವ ದಾರಿಗುಂಟ ನಗರದ ಕಟ್ಟಡಗಳ ಮೇಲೆ ಭಗವಾಧ್ವಜಗಳು ರಾರಾಜಿಸುತ್ತಿದ್ದವು. ಸಾರ್ವಜನಿಕರು ರಸ್ತೆಗಳಲ್ಲಿ ರಂಗೋಲಿ, ಹೂವಿನ ಅಲಂಕಾರ ಮಾಡಿ ಪಥ ಸಂಚಲನವನ್ನು ಸ್ವಾಗತಿಸಿದರು. ಸ್ವಯಂ ಸೇವಕರ ಮೇಲೆ ಹೂಮಳೆಗರೆದು ಹರ್ಷವ್ಯಕ್ತಪಡಿಸಿದರು. ಅಲ್ಲಲ್ಲಿ ವೀರಪುಲಕೇಶಿ, ವೀರಸಾರ್ವಕರ, ಭಗತ್ ಸಿಂಗ, ಪ್ರಮೋದ ಮುತಾಲಿಕ, ಸರದಾರ ವಲ್ಲಭಾಯಿ ಪಟೇಲ, ಶಿವಾಜಿ, ಮಹಾರಾಣಾ ಪ್ರತಾಪಸಿಂಗ್, ಡಾ. ಅಂಬೇಡ್ಕರ ಅವರ ಭಾವಚಿತ್ರಗಳನ್ನು ಅಳವಡಿಸಲಾಗಿ-ತ್ತು. ಮುಖ್ಯರಸ್ತೆಯಲ್ಲಿ ಶ್ರೀರಾಮ, ಶಿವಾಜಿ, ಗೋವುಹಾಗೂ ಕರು, ಭಾರತಮಾತೆಯ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಲಾಗಿ-ತ್ತು. ಶಿವಾಜಿ, ಸುಭಾಷಚಂದ್ರ ಭೋಸ್, ವಿವೇಕಾನಂದ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಒನಕೆ ಓಬವ್ವ, ಭಗತ್‌ಸಿಂಗ್, ಶ್ರೀರಾಮ, ಕಿತ್ತೂರುರಾಣಿ ಚೆನ್ನಮ್ಮ ಸೇರಿದಂತೆ ವಿವಿಧ ರಾಷ್ಟ್ರನಾಯಕರ ವೇಷಧಾರಿ ಮಕ್ಕಳು ಪಥ ಸಂಚಲನವನ್ನು ಸ್ವಾಗತಿಸಿದರು.

ಪಥಸಂಚಲನದಲ್ಲಿ ಬಸವರಾಜ ಕುಂಬಾರ, ಬಸವರಾಜ ಒಣರೊಟ್ಟಿ, ಈರಣ್ಣ ಕಂಠಿ, ಈರಣ್ಣ ಬಂಡಿ, ಸಂಪತ್ತಕುಮಾರ ರಾಠಿ, ರವಿ ಸೇಬಿನಕಟ್ಟಿ, ಸಾಗರ ಮಲಜಿ, ವಿಠ್ಠಲ ಪತ್ತಾರ, ಭುವನೇಶ ಪೂಜಾರ, ವಿವೇಕಾನಂದ ದೇವಾಂಗಮಠ, ಪೋಲಿಸಪ್ಪ ರಾಮದುರ್ಗ, ವಿಜಯ ಕವಿಶೆಟ್ಟಿ, ಮಹೇಶ ಭಾರತಿ, ಶಿವು ಬಾದವಾಡಗಿ, ಮಹೇಶ ಸೂಳಿಭಾವಿ, ಪಾಲಕ್ಷ ಉಂಕಿ, ಮಹಾದೇವ ಜಗತಾಪ, ಜ್ಞಾನೇಶ್ವರ ಬೊಂಬಲೇಕರ, ಸಂಗಣ್ಣ ಹುನಗುಂದ, ಶಂಕರ ಕಾಟವಾ ಸೇರಿದಂತೆ ನೂರಾರು ಸ್ವಯಂಸೇವಕರು ಭಾಗವಹಿಸಿದ್ದರು.

# ಸುಳ್ಳಿನ ಚರಿತ್ರೆ ಬೋಧಿಸುವ ವಾಟ್ಸ್‌ಆಪ್, ಫೇಸ್ ಬುಕ್; ಸಿದ್ದರಾಮಯ್ಯ ವಿಷಾದ

**ವಿಜಯಪುರ, ;** ವಾಟ್ಸ್‌ಆಪ್, ಫೇಸ್ ಬುಕ್ ವಿಶ್ವವಿದ್ಯಾಲಯಗಳು ದುರ್ಬಳಕೆ ಆಗುತ್ತಿರುವ ಸಂದರ್ಭದಲ್ಲಿ ಡಾ. ಮಹಾಂತೇಶ ಬಿರಾದಾರ ಅವರ 'ಮುಖಪುಸ್ತಕದ ಮರೆಯದ ಮುಖಗಳು' ಕೃತಿ ಮಾರ್ಗದರ್ಶಕವಾಗಿದೆ ಎಂದು ಹಿರಿಯ ಲೇಖಕ ಡಾ. ಎಸ್.ಜಿ. ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.



ಬೆಂಗಳೂರಿನ ಬಸವ ಸಮಿತಿಯಲ್ಲಿ ಮೈಸೂರಿನ ಕವಿತಾ ಪ್ರಕಾಶನ ಏರ್ಪಡಿಸಿದ್ದ ಸಮಾರಂಭದಲ್ಲಿ ಅವರು ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ವಾಟ್ಸ್‌ಆಪ್, ಫೇಸ್ ಬುಕ್ ವಿಶ್ವವಿದ್ಯಾಲ ಯಗಳು ಯುವಕರನ್ನು ರೋಗಗ್ರಸ್ತರನ್ನಾಗಿ ಮಾಡುತ್ತಿವೆ. ಇದರಿಂದ ಸಾಮಾಜಿಕ ವಾತಾವರಣ ಹಾಳಾಗುವ ಹಾಗೆ ಯುವಕರ ನಡವಳಿಕೆಗಳು ಇರುತ್ತವೆ. ಇಂಥ ಸಂದರ್ಭದಲ್ಲಿ ಮಹಾಂತೇಶ ಬಿರಾದಾರ ಅವರು ಫೇಸ್ ಬುಕ್ ಮೂಲಕ ಬರೆದ ಲೇಖನಗಳು ಮಾದರಿಯಾಗಿವೆ ಎಂದು ಹೇಳಿದರು. ವಾಟ್ಸ್‌ಆಪ್, ಫೇಸ್ ಬುಕ್ ಮೂಲಕ ಸುಳ್ಳಿನ ಚರಿತ್ರೆ ಬೋಧನೆಯಾಗುತ್ತಿದೆ. ಇದರಿಂದ ಚಾರಿತ್ರಿಕ ಪ್ರಜ್ಞೆ ಕಳೆದುಕೊಂಡಿದ್ದೇವೆ. ಜೊತೆಗೆ ವರ್ತಮಾನ ನಮಗೆ

ಅರ್ಥವಾಗುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಬರಹಕ್ಕೆ ಬೇಕಾದ ಸಾರ ಸಂಗ್ರಹ ಎಲ್ಲರಿಗೂ ದಕ್ಕುವುದಿಲ್ಲ. ಹಾಗೆಯೇ ಒಬ್ಬ ವ್ಯಕ್ತಿಯ ಸಮಗ್ರ ಪರಿಚಯ ಕಷ್ಟಸಾಧ್ಯ. ಅನುಭವ ದ್ರವ್ಯ ಇರಬೇಕು. ಜೊತೆಗೆ ಭಾಷಾ ಸಾಮರ್ಥ್ಯವೂ ಇರಬೇಕು. ಈ ಗುಣಗಳಿರುವ ಮಹಾಂತೇಶ ಬಿರಾದಾರ ಅವರ ಕೃತಿ ಆಪ್ತವಾಗಿ ಓದಿಸಿಕೊಂಡು ಹೋಗುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕೃತಿ ಪರಿಚಯಿಸಿದ ಹಿರಿಯ ಲೇಖಕ ರಂಜಾನ್ ದರ್ಗಾ, ವಿಜಾಪುರ ಮಂದಿ ಎಂದೂ ಆಗೋದಿಲ್ಲ ಚಿಂದಿ. ಆದರೆ ವಿಜಾಪುರ ಮಂದಿ ಹಿಂದುಳಿದಿಲ್ಲ. ಹಿಂದುಳಿವ ಹಾಗೆ ವ್ಯವಸ್ಥೆ ಮಾಡಿದೆ. ಆದರೂ ವಿಜಾಪುರ ಮಂದಿ ಬಹಳ ಸ್ವಾಭಿಮಾನಿಗಳು ಎಂದು ತಿಳಿಸಿದರು.

ಮನುಷ್ಯರನ್ನು ಮನುಷ್ಯರನ್ನಾಗಿ ನೋಡದೆ ಇರುವುದು ದುರಂತ. ಆದರೆ ಮಹಾಂತೇಶ ಬಿರಾದಾರ ಅವರು ಜಾತಿರಹಿತವಾಗಿ ತಮ್ಮ ಕೃತಿಯುನ್ನುಕಟ್ಟಿಕೊಟ್ಟಿದ್ದಾರೆ. ಅವರ ಹೃದಯ ಸಂಪತ್ತು ಮತ್ತು ಮಿತ್ರತ್ವದ ಶಕ್ತಿ ದೊಡ್ಡದು ಎಂದು ಶ್ಲಾಘಿಸಿದರು.

ಮುಖ್ಯ ಅತಿಥಿಗಳಾಗಿ ಆದಾಯ ತೆರಿಗೆ ಇಲಾಖೆಯ ಪ್ರಧಾನ ಆಯುಕ್ತ ಶ್ರೀನಿವಾಸ ಬಿದರಿ, ಕೃಷಿ ಇಲಾಖೆ ಆಯುಕ್ತ ವೈ. ಎಸ್. ಪಾಟೀಲ, ಆಶಾ ಎಂ.ಬಿ.ಪಾಟೀಲ, ಬಿಎಲ್‌ಡಿಇ ಸಂಸ್ಥೆ ನಿರ್ದೇಶಕ ಬಸವನಗೌಡ ಎಂ.ಪಾಟೀಲ, ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಪಿಕೆಎಂ ಪ್ರಶಾಂತ್ ಹಾಜರಿದ್ದರು. ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಅಧ್ಯಕ್ಷತೆ ವಹಿಸಿದ್ದರು.

ಮಹಾಂತೇಶ ಬಿರಾದಾರ ಸ್ವಾಗತಿಸಿದರು. ಗಣೇಶ ಅಮೀನಗಡ ನಿರೂಪಿಸಿದರು. ಕಾರ್ಯಕ್ರಮಕ್ಕೆ ಮುನ್ನ ಜ್ಯೋತಿರ್ಲಿಂಗ ಹೊನಕಟ್ಟಿ ಜಾನಪದ ಹಾಡುಗಳನ್ನು ಹಾಡಿದರು. ಮರೆಯಾಗದ ಲೇಖಕ ಮುಖ್ಯ ಅತಿಥಿಯಾದ ಕೃಷಿ ಇಲಾಖೆ ಆಯುಕ್ತ ವೈ. ಎಸ್. ಪಾಟೀಲ ಮಾತನಾಡಿ, ಸಚಿವರಾದ ಎಂ.ಬಿ.ಪಾಟೀಲ ಅವರ ಜೊತೆ ಹೆಚ್ಚು ಸಮಯ ಕಳೆದವರು ಮಹಾಂತೇಶ ಬಿರಾದಾರ. ಅಧಿಕಾರ ಕೇಂದ್ರಿತ ವಲಯದಲ್ಲಿದ್ದರೂ ಅವರೊಳಗಿನ ಲೇಖಕ ಮರೆಯಾಗದ ಹಾಗೆ ನೋಡಿಕೊಂಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಒಳ್ಳೆಯತನವನ್ನು ಗುರುತಿಸುವ, ಗುರುತಿ ಸಿದವರನ್ನು ಪರಿಚಯಿಸುವ ಒಳ್ಳೆಯ ಗುಣ ಮಹಾಂತೇಶ ಬಿರಾದಾರ ಅವರಲ್ಲಿದೆ ಎಂದು ಅಭಿನಂದಿಸಿದರು.

# ಜೈನ್ ಅಭಿವೃದ್ಧಿ ನಿಗಮ ಸ್ಥಾಪನೆಗೆ ಅರುಣ ಯಲಗುದ್ರಿ ಒತ್ತಾಯ

**ಅಥಣಿ :** ಮಹಾರಾಷ್ಟ್ರ ರಾಜ್ಯದ ಮಾದರಿಯಲ್ಲಿ ಕರ್ನಾಟಕ ರಾಜ್ಯದಲ್ಲಿಯೂ ಕೂಡ ಜೈನ್ ಸಮಾಜದ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಬೇಕೆಂದು ಭಾರತೀಯ ಜೈನ ಸಂಘಟನೆಯ ಬೆಳಗಾವಿ ವಿಭಾಗದ ಅಧ್ಯಕ್ಷ ಅರುಣ ಯಲಗುದ್ರಿ ಒತ್ತಾಯಿಸಿದ್ದಾರೆ.



ಅಥಣಿ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜೈನ ಸಂಘಟನೆ ಬೆಳಗಾವಿ ವಿಭಾಗದ ಅಧ್ಯಕ್ಷ ಹಾಗೂ ಸಮಾಜದ ಮುಖಂಡ ಅರುಣ ಯಲಗುದ್ರಿ ಮಾತನಾಡಿ ಮಹಾರಾಷ್ಟ್ರ ಸರ್ಕಾರ ಶುಕ್ರವಾರ ನಡೆದ ಸಂಪುಟ ಸಭೆಯಲ್ಲಿ ಜೈನ್ ಸಮಾಜದ ಸ್ವತಂತ್ರ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡಲು ತೀರ್ಮಾನ ಕೈಗೊಂಡಿದೆ. ಹೀಗಾಗಿ, ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರವೂ ನಮ್ಮ ನ್ಯಾಯಯುತ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಮಹಾರಾಷ್ಟ್ರ ಸೇರಿದಂತೆ ದೇಶದಲ್ಲೇ ಅತೀ ಹೆಚ್ಚು ಸಾಮಾಜಿಕ ಸಂಸ್ಥೆಗಳನ್ನು ನಡೆಸುತ್ತಿರುವ ಕೀರ್ತಿ ಜೈನ್ ಸಮಾಜಕ್ಕೆ ಸಲ್ಲುತ್ತದೆ. ಸಮಾಜವು ವ್ಯಾಪಾರ, ಕೈಗಾರಿಕೆಯಲ್ಲಿಯೂ ಮುಂದಿದ್ದು, ಅತೀ ಹೆಚ್ಚು ತೆರಿಗೆ ಪಾವತಿಸುವ ಸಮುದಾಯವಾಗಿದೆ. ಆದರೆ ಸಮಾಜದಲ್ಲಿ ಕೃಷಿ ಮಾಡುವವರ ಸಂಖ್ಯೆಯೂ ಗಣನೀಯವಾಗಿದ್ದು, ಕೆಳ ಮಧ್ಯಮ ವರ್ಗದ ಹಾಗೂ ಬಡತನ ರೇಖೆಗಿಂತ ಕೆಳಗಿನವರ ಸಂಖ್ಯೆ ಶೇ.30ರಷ್ಟು ಇದೇ ಹೀಗಾಗಿ, ಸಮಾಜದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಸ್ವತಂತ್ರ ಅಭಿವೃದ್ಧಿ ನಿಗಮ ಸ್ಥಾಪಿಸುವಂತೆ ಹಲವಾರು ವರ್ಷಗಳಿಂದ ಬೇಡಿಕೆಯಿದ್ದರೂ ಕೂಡ ಇಲ್ಲಿಯವರೆಗೂ ಯಾವ ಸರ್ಕಾರಗಳು ಸ್ಪಂದಿಸಿಲ್ಲ. ಕೂಡಲೇ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರವು ಜೈನ ಸಮುದಾಯದವರ ಬಹುದಿನಗಳ ಬೇಡಿಕೆಯನ್ನು ಈಡೇರಿಸುವ ಮೂಲಕ ಜೈನ್ ಸಮಾಜದ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡುವಂತೆ ಒತ್ತಾಯಿಸಿದ್ದಾರೆ.

# ಮುತವಲ್ಲಿಗಳ ಸಮ್ಮೇಳನ, ವಕ್ಫ್ ಅದಾಲತ್ ಕಾರ್ಯಕ್ರಮದಲ್ಲಿ ಸಚಿವ ಜಮೀರ ಅಹ್ಮದ್‌ಖಾನ್ ಭರವಸೆ

**ವಿಜಯಪುರ :** ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ನಮಗೆ ಒದಗಿಸಿದ ಸಂವಿಧಾನದಿಂದಲೇ ಇಂದು ನಾವು ಅತ್ಯಂತ ನೆಮ್ಮದಿಯಿಂದ ಬದುಕಲು ಸಾಧ್ಯವಾಗಿದೆ. ಪ್ರತಿಯೊಬ್ಬರಿಗೂ ತಮ್ಮ ಹಕ್ಕು ಪ್ರತಿಪಾದನೆಗೆ ಸಂವಿಧಾನ ಅವಕಾಶ ಒದಗಿಸಿದ್ದು, ವಕ್ಫ್ ಆಸ್ತಿ ಯಾವುದೇ ವೈಯಕ್ತಿಕ ಸ್ವತ್ತಲ್ಲ, ಇದು ದೇವರ ಆಸ್ತಿ ಇದರ ಸಂರಕ್ಷಣೆ ನಮ್ಮ ಹಕ್ಕು ಹಾಗೂ ಜವಾಬ್ದಾರಿಯಾಗಿದೆ ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವ ಬಿ.ಜೆಡ್.ಜಮೀರಹ್ಮದ ಖಾನ್ ಹೇಳಿದರು.

ಸೋಮವಾರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ, ವಕ್ಫ್ ಇಲಾಖೆ ಹಾಗೂ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಸಹಯೋಗದಲ್ಲಿ ಜಿಲ್ಲೆಯ ಮುತ್ತವಲ್ಲಿಗಳ ಸಮ್ಮೇಳನ ಹಾಗೂ ವಕ್ಫ್ ಅದಾಲತ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ವಕ್ಫ ಆಸ್ತಿ ಸಂರಕ್ಷಣೆ ಹಾಗೂ ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಈವರೆಗೆ ರಾಜ್ಯದಾದ್ಯಂತೆ 10 ಜಿಲ್ಲೆಗಳಲ್ಲಿ ವಕ್ಫ್ ಅದಾಲತ್ ಹಮ್ಮಿಕೊಳ್ಳಲಾಗಿದ್ದು, ಇಂದು ವಿಜಯಪುರದಲ್ಲಿ 11ನೇ ಅದಾಲತ್ ಹಮ್ಮಿಕೊಳ್ಳಲಾಗಿದೆ. ಕಳೆದ 10-15 ವರ್ಷಗಳಿಂದ ಬಾಕಿ ಉಳಿದ ವಕ್ಫ್ ಖಾತೆ ಬದಲಾವಣೆ ಪ್ರಕರಣಗಳಿಗೆ ಸಂಬಂಧಿಸಿದಂತೆ ನಾನು ಸಚಿವನಾದ ಮೇಲೆ 727 ಖಾತೆ ಬದಲಾವಣೆಗೆ ಕ್ರಮ ವಹಿಸಲಾಗಿದೆ ಎಂದು ಅವರು ಹೇಳಿದರು.

ವಿಜಯಪುರದಲ್ಲಿ ಇಂದು ಹಮ್ಮಿಕೊಂಡ ಅದಾಲತ್‌ನಲ್ಲಿ ವಕ್ಫ್ ಆಸ್ತಿಗಳ ಅತಿಕ್ರಮಣದ 17 ಅರ್ಜಿಗಳು, ಖಬರಸ್ಥಾನ (ಸ್ಮಶಾನ)ಕ್ಕೆ ಸಂಬಂಧಿಸಿದ್ದು, ಖಾತೆ ಬದಲಾವಣೆಯ 81 ಅರ್ಜಿಗಳು, ಸರ್ವೇ ಕಾರ್ಯಕ್ಕಾಗಿ 25 ಅರ್ಜಿಗಳು ಸೇರಿದಂತೆ ಒಟ್ಟು 330 ಅರ್ಜಿಗಳು ಸಲ್ಲಿಕೆಯಾಗಿವೆ. ಇಲ್ಲಿ ಸಲ್ಲಿಕೆಯಾದ ಅರ್ಜಿಗಳು ಯಾವುದೇ ಕಾರಣ-ಕ್ಕೂ ವ್ಯರ್ಥವಾಗುವುದಿಲ್ಲ, ಪ್ರತಿಯೊಂದು ಅರ್ಜಿಗಳಿಗೂ ಸ್ಪಂದಿಸಲಾಗುವುದು. ಸ್ವೀಕ-ರಿಸಲಾದ ಅರ್ಜಿಗಳಿಗೆ ಸಂಬಂಧಿಸಿದಂತೆ ನಾಳೆಯೇ ಸಭೆ ನಡೆಸಿ, ಅಧಿಕಾರಿಗಳಿಗೆ ಒಂದು ತಿಂಗಳ ಕಾಲಾವಕಾಶ ಒದಗಿಸಿ ನಿಗದಿತ ಅವಧಿಯಲ್ಲಿಯೇ ಈ ಅರ್ಜಿಗಳ ಪರಿಹಾರಕ್ಕೆ ಕ್ರಮ ವಹಿಸಲಾಗುವುದು ಎಂದು ಅವರು ಹೇಳಿದರು.




ರಾಜ್ಯದಲ್ಲಿಯೇ ವಿಜಯಪುರದಲ್ಲಿ ಅತಿ ಹೆಚ್ಚು ವಕ್ಫ್ ಆಸ್ತಿ ಹೊಂದಿದೆ. ವಕ್ಫ್ ಆಸ್ತಿಯ ಸದ್ಬಳಕೆ ಮಾಡಿಕೊಂಡು ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸೂರು ಕಲ್ಪಿಸುವ ಸದುದ್ದೇಶ ಹೊಂದಲಾಗಿದೆ. ರಾಜ್ಯದಲ್ಲಿ ಒಟ್ಟು 1.12 ಲಕ್ಷ ಎಕರೆ ವಕ್ಫ್ ಆಸ್ತಿಯಲ್ಲಿ 85 ಸಾವಿರ ಎಕರೆ ಅತಿಕ್ರಮಣವಾಗಿ ಕೇವಲ 23000 ಎಕರೆ ಮಾತ್ರ ಉಳಿದಿದೆ. ವಕ್ಫ್ ಆಸ್ತಿ ಕಬಳಿಕೆ- ಹಗರಣಕ್ಕೆ ಮುಂದಾಗಬಾರದು. ವಕ್ಫ್ ಆಸ್ತಿ ದೇವರ ಆಸ್ತಿ, ಇದರ ಸಂರಕ್ಷಣೆ ನಮ್ಮ ಜವಾಬ್ದಾರಿಯಾಗಿದ್ದು, ಪ್ರತಿಯೊಬ್ಬರು ವಕ್ಫ್ ಆಸ್ತಿ ಸಂರಕ್ಷಣೆಗೆ ಮುಂದಾಗಬೇಕು ಎಂದು ಅವರು ಕರೆ ನೀಡಿದರು.

ಹಣಕಾಸು ಇಲಾಖೆಗೆ ಮರಳಿ ಹೋದ ವಕ್ಫ್ ಅನುದಾನವನ್ನು ನಾನು ಸಚಿವನಾದ ಮೇಲೆ ಮತ್ತೆ ಮರಳಿ ಪಡೆಯಲಾಗಿದೆ. ಯಾವುದೇ ಸಮಾಜದ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣ ಅತ್ಯಂತ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಈ ಅನುದಾನವನ್ನು ಬಳಸಿಕೊಂಡು ಅಲ್ಪಸಂಖ್ಯಾತ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ, ರಾಜ್ಯದ 15 ಜಿಲ್ಲೆಗಳಲ್ಲಿ ವಕ್ಫ್ ಮಂಡಳಿಯಿಂದ ಪಿಯು ಕಾಲೇಜ್ ನಿರ್ಮಾಣ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ರಾಜ್ಯದ ಪ್ರತಿಯೊಂದು ಜಿಲ್ಲೆಗಳಲ್ಲಿ ಕಾಲೇಜ್ ನಿರ್ಮಾಣದ ಉದ್ದೇಶ ಹೊಂದಲಾಗಿದೆ ಎಂದು ಹೇಳಿದರು.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅತಿ ಹೆಚ್ಚು ಶಿಕ್ಷಣಕ್ಕಾಗಿ ಒತ್ತು ನೀಡಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಸ್ಥಗಿತಗೊಂಡಿದ್ದ ವಿದ್ಯಾರ್ಥಿವೇತನ ಪುನ: ಒದಗಿಸಲಾಗುತ್ತಿದೆ. ಇಡೀ ದೇಶದಲ್ಲಿಯೇ ಮಾದರಿಯಾದ ಹಜ್ ಭವನ ಕರ್ನಾಟಕದಲ್ಲಿ ನಿರ್ಮಿಸಲಾಗಿದೆ. ಸಮಾಜದ ಮಕ್ಕಳು ಉನ್ನತ ಶಿಕ್ಷಣ ಪಡೆದು, ಉನ್ನತ ಹುದ್ದೆ ಪಡೆಯಲು ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದಿಂದ 1300 ವಿದ್ಯಾರ್ಥಿಗಳಿಗೆ ನೆರವು ಒದಗಿಸಲಾಗಿದೆ. ವಿದೇಶದಲ್ಲಿ ವ್ಯಾಸಂಗಕ್ಕಾಗಿ ನೆರವು ಒದಗಿಸಲಾಗುತ್ತಿದೆ. ನಿರುದ್ಯೋಗಿ ಯುವಕ-ರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ವಾಹನ ಖರೀದಿಗೆ ಸಬ್ಸಿಡಿ ಒದಗಿಸಲಾಗುತ್ತಿದೆ. ಮದರಸಾಗಳಲ್ಲಿ ಶಿಕ್ಷಕರನ್ನು ನೇಮಕ ಮಾಡಿ ಗುಣಮಟ್ಟದ ಶಿಕ್ಷಣ ಒದಗಿಸಲಾಗುತ್ತಿದೆ. ಹಜ್ ಭವನದಲ್ಲಿ 400 ವಿದ್ಯಾರ್ಥಿಗಳಿಗೆ ಐಎಎಸ್, ಐಪಿಎಸ್, ಕೆಎಎಸ್ ತರಬೇತಿ ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಕರ್ನಾಟಕ ಸಾಬೂನು-ಮಾರ್ಜಕ ಅಭಿವೃದ್ಧಿ ನಿಗಮದ ಅಧ್ಯಕ್ಷ ಶಾಸಕ ಸಿ.ಎಸ್. ನಾಡಗೌಡ ಅವರು ಮಾತನಾಡಿ, ವಕ್ಫ್ ಅದಾಲತ್‌ಗಳನ್ನು ಹಮ್ಮಿಕೊಳ್ಳುವ ಮೂಲಕ ಗ್ರಾಮ, ತಾಲೂಕಾ ಮಟ್ಟದ ಹಾಗೂ ಜಿಲ್ಲಾ ಮಟ್ಟದಲ್ಲಿರುವ ವಿವಿಧ ವಕ್ಫ್ ಸಮಸ್ಯೆ, ಸ್ಮಶಾನ ಜಾಗದ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಉದ್ದೇಶದಿಂದ ಅದಾಲತ್ ಹಮ್ಮಿಕೊಂಡು ಪರಿಹರಿಸಲಾಗುತ್ತಿರುವುದು ಅತ್ಯಂತ ಶ್ಲಾಘನೀಯವಾಗಿದೆ ಎಂದರು.

ಸಮಾಜದಲ್ಲಿನ ಪ್ರತಿಯೊಂದು ಸಮಸ್ಯೆಗೆ ಪರಿಹಾರ ಕಲ್ಪಿಸಿ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳನ್ನು ಕಲ್ಪಿಸುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಅಂಜುಮನ್ ಸಂಸ್ಥೆ ಸೇರಿದಂತೆ ಸಮಾಜದ ಮುಖಂಡರು, ಜನಪ್ರತಿನಿಧಿಗಳು ಮುಂದಾಗಬೇಕು. ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರಕಿಸಬೇಕು. ವಕ್ಫ್ ಆಸ್ತಿ ದೇವರ ಆಸ್ತಿ, ದೇವರ ಆಸ್ತಿಯಲ್ಲಿ ವೈಮನಸ್ಸು ಬರಬಾರದು. ಎಲ್ಲರೂ ಸಮನ್ವಯತೆಯಿಂದ, ಸಹೋದರಂತೆ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು, ತಿದ್ದಿಕೊಂಡು ಮುನ್ನಡೆಯಬೇಕು ಎಂದು ಅವರು ಕರೆ ನೀಡಿದರು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ, ಸಿಂದಗಿ ಶಾಸಕ ಅಶೋಕ ಮನಗೂಳಿ, ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಅನ್ವರಬಾಶಾ ಅವರು ಮಾತನಾಡಿದರು.

ಮೌಲಾನಾ ತನ್ವೀರ ಪೀರಾ ಹಾಸ್ಮಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕನ್ನಾನ್ ಮುಶ್ರೀಫ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮಳೆ ಅಂದ ಬೆಳೆ ಚಂದಲೆ ಪರಾಕ್
# ಎರಂಗಳಿಯಲ್ಲಿ ಗೊರವಯ್ಯ ಕಾರಣಿಕೋತ್ಸವ

ಬಳ್ಳಾರಿ ಅಕ್ಟೋಬರ್ 12. ತಾಲೂಕಿನ ಯರಂಗಲಿ ಗ್ರಾಮದ ಶ್ರೀ ಕ್ಷೇತ್ರ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ದಸರಾ ಹಬ್ಬದ ಪ್ರಯುಕ್ತ ಎರಡು ದಿನಗಳ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಆಯುಧ ಪೂಜೆಯೆಂದು ಮೈಲಾರಲಿಂಗೇಶ್ವರ ಸ್ವಾಮಿಗೆ ವಿಶೇಷವಾದ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸಿ ಸರಪಳಿ ಪವಾಡ ನಡೆಸಲಾಯಿತು.

ನಂತರ ವಿಜಯದಶಮಿ ಕೊನೆಯ ದಿನವಾದ ಇಂದು ಗೊರವಯ್ಯ ಬಿಲ್ಲನ್ನು ಏರಿ ಕಾರ್ಣಿಕವನ್ನು ನುಡಿದರು. ಸಂಜೆ 4 ಗಂಟೆಯ ಸಮಯದಲ್ಲಿ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯ ಭಕ್ತರೆಲ್ಲರೂ ಸೇರಿ ಕಾರ್ಣಿಕ ಉತ್ಸವವನ್ನು ನಡೆಸಿದರು. ಈ ಸಂದರ್ಭದಲ್ಲಿ ಬಿಲ್ಲನ್ನು ಏರಿದ ಕಾರ್ಣಿಕದ ಗೊರವಯ್ಯ ಮಳೆ ಅಂದ ಬೆಳೆ ಚಂದಲೆ ಪರಾಕ್ ಎಂದು ಕಾರ್ಣಿಕ ನುಡಿದರು.

ಈ ಸಂದರ್ಭದಲ್ಲಿ ಎರಂಗಳಿ ಸುತ್ತಮುತ್ತಲಿನ ಗ್ರಾಮಗಳ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯ ನೂರಾರು ಭಕ್ತರು ನೆರೆದಿದ್ದರು.





# ಶಾಸಕ ನಾರಾ ಭರತ್ ರೆಡ್ಡಿ ಕಚೇರಿಯಲ್ಲಿ ಆಯುಧ ಪೂಜೆ





● ವಾರ್ತಾಲೋಕ ವಾರ್ತೆ

**ಬಳ್ಳಾರಿ, ಅ.12:** ವಿಜಯ ದಶಮಿ ಹಬ್ಬದ ಪ್ರಯುಕ್ತ ಶುಕ್ರವಾರ ಸಂಜೆ ಬಳ್ಳಾರಿಯ ಗಾಂಧಿ ನಗರದಲ್ಲಿರುವ ಶ್ರೀ. ರಾಘವೇಂದ್ರ ಎಂಟರಪ್ರೈಜಸ್'ನ ಕಚೇರಿಯಲ್ಲಿ ಶಾಸಕ ನಾರಾ ಭರತ್ ರೆಡ್ಡಿ ಪ್ರತಿ ವರ್ಷದಂತೆ ಈ ವರ್ಷವೂ ಆಯುಧ ಪೂಜೆ ಕಾರ್ಯಕ್ರಮವನ್ನು ನಡೆಸಲಾಯಿತು.

ವಿಶೇಷ ಆಯುಧ ಪೂಜೆಯನ್ನು ನೆರವೇರಿಸಿದ ಭರತ್ ರೆಡ್ಡಿ ದಂಪತಿಗಳು ಕುಟುಂಬದ ಹಿರಿಯರು ಹಾಗೂ ಮಾಜಿ ಶಾಸಕರಾದ ಸೂರ್ಯನಾರಾಯಣ ರೆಡ್ಡಿ ಅವರ ಆಶೀರ್ವಾದವನ್ನು ಪಡೆದರು

ಈ ಪೂಜಾ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಬಳ್ಳಾರಿ ವಲಯ ಐಜಿಪಿ ಲೋಕೇಶ್, ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ, ನಗರ ಡಿ.ಎಸ್.ಪಿ ನಂದರೆಡ್ಡಿ, ಹೆಚ್ಚುವರಿ ಜಿಲ್ಲಾಧಿಕಾರಿ ಜುಬೇರ್ ಅಹ್ಮದ್, ವಿಮ್ಸ್ ನಿರ್ದೇಶಕ ಡಾ.ಗಂಗಾಧರ ಗೌಡ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಯಲ್ಲಾ ರಮೇಶಬಾಬು, ಜಿಲ್ಲಾ ಸರ್ಜನ್ ಡಾ.ಬಸರೆಡ್ಡಿ, ಮಹಾನಗರ ಪಾಲಿಕೆಯ ಆಯುಕ್ತ ಖಲೀಲಸಾಬ ಸೇರಿದಂತೆ ಹಲವಾರು ಗಣ್ಯರು ಪೂಜೆಯಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್ ಪಕ್ಷದ ಜಿಲ್ಲಾ ಅಧ್ಯಕ್ಷ ಅಲ್ಲಂ ಪ್ರಶಾಂತ್, ಚಿದಾನಂದಪ್ಪ ಯಾದವ್, ಎಪಿಎಂಸಿ ಅಧ್ಯಕ್ಷ ಕಟ್ಟೆಮನೆ ನಾಗೇಂದ್ರ, ಬಗರ್ ಹುಕುಂ ಸಮಿತಿ ತಾಲೂಕಾಧ್ಯಕ್ಷ ತಿಮ್ಮನಗೌಡ, ಮೇಯರ್ ಮುಲ್ಲಂಗಿ ನಂದೀಶ್, ಮಾಜಿ ಮೇಯರ್ ರಾಜೇಶ್ವರಿ ಸುಬ್ಬರಾಯುಡು, ಪಾಲಿಕೆಯ ಸದಸ್ಯರಾದ ನೂರ್ ಮಹಮ್ಮದ್, ಮತ್ತು ಹಾಲಿ ಹಾಗೂ ಮಾಜಿ ಸದಸ್ಯರು, ವಿವಿಧ ಸಮಿತಿ–ಮಂಡಳಿ–ಪ್ರಾಧಿಕಾರಗಳ ಸದಸ್ಯರು, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎ.ಮಾನಯ್ಯ, ಚೇಂಬರ್ಶ ಕಾಮರ್ಸ್ ಅಧ್ಯಕ್ಷರಾದ ಯಶವಂತ್ ರಾಜ್ ನಾಗರೆಡ್ಡಿ, ನಟರಾಜ್ ಚಿತ್ರಮಂದಿರ ವ್ಯವಸ್ಥಾಪಕ ಲಕ್ಷ್ಮಿಕಾಂತ್ ರೆಡ್ಡಿ ಸೇರಿದಂತೆ ಹಲವಾರು ಗಣ್ಯರು ಭಾಗವಹಿಸಿದ್ದರು.

ಇದಕ್ಕೂ ಮುನ್ನ ನಾರಾ ಭರತ್ ರೆಡ್ಡಿ ಕುಟುಂಬವು ನಗರದ ಆದಿ ದೇವತೆ ಶ್ರೀ ಕನಕ ದುರ್ಗಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭ ಪುತ್ರಿ ವರಳಿಕಾ ಇದ್ದರು.

# ದೇವಿಪುರಾಣದ ಮಹಾಮಂಗಲದಲ್ಲಿ ಶ್ರೀಯಲ್ಲಮ್ಮತಾಯಿ ಸಂದೇಶ
## ಪ್ರತಿಯೊಬ್ಬರೂ ದಾನ–ಧರ್ಮ ಮಾಡುವ ಮನೋಭಾವನೆಯನ್ನು ಮೈಗೂಡಿಸಿಕೊಳ್ಳಿರಿ

● ವಾರ್ತಾಲೋಕ ವಾರ್ತೆ

**ಕುರುಗೋಡು.ಅ.12** ಇಂಧಿನ ಆಧುನಿಕ ಯುಗದಲ್ಲಿ ಪ್ರತಿಯೊಬ್ಬರೂ ದಾನ–ಧರ್ಮ ಮಾಡುವ ಮನೋಭಾವನೆಯನ್ನು ಮೈಗೂಡಿಸಿಕೊಳ್ಳಿರಿ ಎಂದು ಕುರುಗೋಡು ಶ್ರೀಯಲ್ಲಮ್ಮತಾಯಿ ನೆರೆದ ಭಕ್ತರಿಗೆ ಸಂದೇಶ ನೀಡಿದರು. ಅವರು ಪಟ್ಟಣದ ಬಳ್ಳಾರಿರಸ್ತೆಯಲ್ಲಿನ ಶಿವಶರಣೆ ಶ್ರೀಯಲ್ಲಮ್ಮದೇವಿ ದೇವಸ್ಥಾನದ ಆವರಣದಲ್ಲಿ ಶರನ್ನವರಾತ್ರಿ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ದೇವಿಪುರಾಣ ಕಾರ್ಯಕ್ರಮದ ಮಹಾಮಂಗಲ ಕಾರ್ಯಕ್ರಮದಲ್ಲಿ ಸಾನಿಧ್ಯವಹಿಸಿ ಮಾತನಾಡಿದ ಅವರು, ಭಕ್ತಿಯಿಂದಲೇ ಜೀವನದಲ್ಲಿ ಮುಕ್ತಿಸಾಧ್ಯ ಆದ್ದರಿಂದ ಎಲ್ಲರೂ ಭಕ್ತಿವಂತರಾಗಿ ಉತ್ತಮ ಭಾವನೆಯನ್ನು ಪಡೆದು ಜೀವನದಲ್ಲಿ ಅಭಿವೃದ್ಧಿಹೊಂದಬೇಕೆಂದು ಸಲಹೆ ನೀಡಿದರು. ದೇವಿಪುರಾಣವನ್ನು ಆರಂಭದಿಂದ–ಮಹಾಮಂಗ ಲದವರೆಗೂ ಬಾದನಹಟ್ಟಿ ಗ್ರಾಮದ ಪುರಾಣ ಪ್ರವಚನ ಹೇಳುವ ಕಲಾವಿದರು ಸಾಂಗೋಪವಾಗಿ ಶ್ರದ್ಧಾ–ಭಕ್ತಿಯಿಂದ ನಡೆಸಿಕೊಂಡು ಬಂದಿರುವುದು ಹೆಮ್ಮೆಯ ಸಂಗತಿ ಎಂದು ನುಡಿದರು. ಬಳ್ಳಾರಿನಗರದ ಡಾ.ಕುಸುಮಾಸೋಮಶೇಖರ ಮಾತನಾಡಿ, ಎಲ್ಲರೂ ದೇವಿಪುರಾಣವನ್ನು ಆಲಿಸುವ ಮನೋಭಾವನೆಯನ್ನು ಹೊಂದಿ ಶ್ರೀಯಮ್ಮದೇವಿಯ ಕೃಪೆಗೆ ಪಾತ್ರರಾಗಬೇಕೆಂದು ನುಡಿದರು.



ಹೆಸರಾಂತ ಪ್ರವಚನಕಾರ ಬಾದನಹಟ್ಟಿಯ ಎಸ್.ಗಾದಿಲಿಂಗಪ್ಪನವರು ಪ್ರವಚನ ನೀಡಿ ಮಾತನಾಡಿ, ಶಿಕ್ಷಣವೇ ಶಕ್ತಿ ಎಂಬ ನಾಣ್ಣುಡಿಯಂತೆ ಪ್ರತಿಯೊಬ್ಬ ತಂದೆ–ತಾಯಿಂದಿರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣಕೊಡಿಸಿ, ಅವರಿಗೆ ದಾರಿದೀಪವಾಗಬೇಕು, ಅಂದಾಗ ಮಾತ್ರ ಆ ಮಕ್ಕಳು ಸಮಾಜದಲ್ಲಿ ಉತ್ತಮ ಪ್ರಜೆಗಳಾಗಬಲ್ಲರು. ಆದ್ದರಿಂದ ಪ್ರತಿವರ್ಷಕ್ಕಿಂತಲೂ ಈವರ್ಷ ಪುರಾಣಕಾರ್ಯಕ್ರಮವು ಯಶಸ್ವಿಯಾಗಿ ಜರುಗಲು ಇಲ್ಲಿನ ಭಕ್ತರು, ಮತ್ತು ಸೇವಾಸಮಿತಿ ಮುಖಂಡರು ಸಹಕಾರ ನೀಡಿದ್ದಾರೆ ಎಂದು ಅವರ ಕಾರ್ಯವೈಖರಿಗೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಹಾಮಂಗಲ ನಿಮಿತ್ತ ಸ್ಥಳೀಯ ಮುಖಂಡರು, ಬಳ್ಳಾರಿವೈದ್ಯರನ್ನು ಮತ್ತು ಪತ್ರಕರ್ತರನ್ನು ಸೇವಾಸಮಿತಿವತಿಯಿಂದ ಅಭಿನಂದಿಸಿ ಗೌರವಿಸಿದರು. ಪುರಾಣ ಪಠಣಕಾರರಾದ ಕೆ.ಜಗದೀಶ, ಸಂಗೀತಸೇವೆಯಲ್ಲಿ ಕಲಾವಿದ ಎರ್ರಿನಾಗೇಶ ಅವರು ತಮ್ಮ ಮಧುರಕಂಠದಿಂದ ಇಂಪಾಗಿ ಹಾಡುವುದುರ ಮೂಲಕ ಭಕ್ತರನ್ನು ಗಮನಸೆಳೆದರು. ಡಾ.ಸೋಮಶೇಖರ ಜಮಖಂಡಿ, ಕಲಾವಿದರಾದ ದೇವೇಂದ್ರಪ್ಪ, ಕೆ.ಕರಿಬಸವ, ಹೆಚ್.ಮಲ್ಲಿಗೌಡ, ಶ್ರೀಯಲ್ಲಮ್ಮದೇವಿಯ ಭಕ್ತಮಂಡಳಿಯ ಸದಸ್ಯರು, ಪುರಾಣದ ವ್ಯವಸ್ಥಾಪರು, ಬಾದನಹಟ್ಟಿ, ಕುರುಗೋಡು, ವದ್ದಟ್ಟಿ ಸೇರಿದಂತೆ ಇತರೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ, ಪ್ರಸಾದ ಸ್ವೀಕರಿಸಿ, ಶಿವಶರಣೆ ಶ್ರೀಯಲ್ಲಮ್ಮದೇವಿಯ ಕೃಪೆಗೆ ಪಾತ್ರರಾದರು.

# ದೇವಿಪುರಾಣ ಮಹಾಮಂಗಲ ನಿಮಿತ್ತ ಶ್ರೀಸುಂಕ್ಲಮ್ಮದೇವಿಯ ಮೂರ್ತಿ ಭವ್ಯಮೆರವಣಿಗೆ

● ವಾರ್ತಾಲೋಕ ವಾರ್ತೆ

**ಕುರುಗೋಡು.ಅ.12** ಪಟ್ಟಣದ ಶ್ರೀಸುಂಕ್ಲಮ್ಮದೇವಿ ದೇವಸ್ಥಾನದಲ್ಲಿ ಶರನ್ನವರಾತ್ರಿ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ದೇವಿಪುರಾಣ ಮಹಾಮಂಗಲ ನಿಮಿತ್ತ ಶ್ರೀಸುಂಕ್ಲಮ್ಮದೇವಿ ಮೂರ್ತಿ ಮೆರವಣಿಗೆಯನ್ನು ಸಹಸ್ರಾರು ಸಂಖ್ಯೆಯ ಭಕ್ತರ ಸಮೂಹದೊಂದಿಗೆ ಸಂಬ್ರಮದಿಂದ ಜರುಗಿತು.

ಶ್ರೀದೊಡ್ಡಬಸವೇಶ್ವರಸ್ವಾಮಿ ದೇವಸ್ಥಾನದಿಂದ ಪೂರ್ಣ ಕುಂಬಕಳಸಹೊತ್ತ ಮಹಿಳೆಯರು, ಡೊಳ್ಳು, ತಾಳ, ಮೇಳ ಸಕಲವಾಧ್ಯಗಳೊಂದಿಗೆ ಪ್ರಾರಂಭವಾದ ಮೆರವಣಿಗೆಯು ಕೊನೆಯಲ್ಲಿ ಶ್ರೀಸುಂಕ್ಲಮ್ಮದೇವಿ ದೇವಸ್ಥಾನದಕ್ಕೆ ತಲುಪಿ ಮುಕ್ತಾಯಗೊಂಡಿತು.

ನಂತರ ದೇವಸ್ಥಾನದಲ್ಲಿ ಹೆಸರಾಂತ ಪ್ರವಚನಕಾರ ಶಾಸ್ತ್ರೀಸಿದ್ಧರಾಮನಗೌಡ್ರು ಮಸೀದಿಪುರ ಅವರು ದೇವಿಪುರಾಣದ ಕೊನೆಯದಿನದಂದು ಪುರಾಣ ಪ್ರವಚನದಲ್ಲಿ ನೆರೆದ ಭಕ್ತರಿಗೆ ದೇವಿಪುರಾಣದ ಮಹತ್ವ ಅದರ ಸಾರಾಂಶವನ್ನು ತಿಳಿಸಿ ದೇವಿಪುರಾಣವನ್ನು ಮುಕ್ತಾಯಗೊಳಿಸಿ, ಪುನಃ ದೇವಿಪುರಾಣದ 2 ನುಡಿಗಳನ್ನು ಹೇಳಿ ಕೊನೆಗೊಳಿಸಿದರು. ಸಂಗೀತಸೇವೆಯನ್ನು ಕಲಾವಿದ ವಸಂತಕುಮಾರ್ ಅವರು ತಮ್ಮ ಮಧುರಕಂಠದಿಂದ ಹಿಂಪಾದ ಹಾಡುಗಳನ್ನು ಆಡಿ ನೆರೆದ ಭಕ್ತರಿಗೆ ಸಂಗೀತದ ರಸದೌತಣ ನೀಡಿದರು. ಇವರಿಗೆ ಕಲಾವಿದ ಸಿಡಿಗಿನಮಳೆ ಎರ್ರಿಸ್ವಾಮಿಯವರು ತಬಲಾಸಾಥ್ ನೀಡಿದರು.

ದೇವಿಪುರಾಣದ ಸೇವಾಸಮಿತಿಯವರು, ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿ ಶ್ರೀಸುಂಕ್ಲಮ್ಮದೇವಿಯ ಕೃಪೆಗೆ ಪಾತ್ರರಾದರು.



# ದಸರ ನವರಾತ್ರಿಯ ಪ್ರಯುಕ್ತ ಬಂಡಿಹಟ್ಟಿ ಶ್ರೀಮಾರೆಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ

● ವಾರ್ತಾಲೋಕ ವಾರ್ತೆ

**ಬಳ್ಳಾರಿ,ಅ.12:** ಕೌಲ್ ಬಜಾರ್ ಭಾಗದ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಬಂಡಿಹಟ್ಟಿ ಪ್ರದೇಶದ 32ನೇ ವಾರ್ಡಿನ ದಲಿತಕೇರಿಯಲ್ಲಿ ಇದೇ 11ರಂದು ಶುಕ್ರವಾರ ನವರಾತ್ರಿ ಹಾಗೂ ದಸರಾ ಹಬ್ಬದ ಪ್ರಯುಕ್ತ ಶ್ರೀಮಾರೆಮ್ಮ ದೇವಿ ದೇವಸ್ಥಾನದಲ್ಲಿ ಕರ್ನಾಟಕ ಏಕೀಕರಣ ರಕ್ಷಣಾ ಸೇನಾ ಸಮಿತಿಯ ಬಂಡಿಹಟ್ಟಿ ಘಟಕದ ವತಿಯಿಂದ ಮತ್ತು ಸಕಲ ಭಕ್ತಾದಿಗಳ ಸಮ್ಮುಖದಲ್ಲಿ ವಿಶೇಷ ಪೂಜೆ ಹಾಗೂ ಪ್ರಸಾದ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ವಿಜಯ ದಶಮಿಯ ಹಬ್ಬದಲ್ಲಿ ಎಲ್ಲರಿಗೂ ಒಳ್ಳೆಯದನ್ನು ಮಾಡಿ ಆ ತಾಯಿ ಆಯುಷ್ಯ ಆರೋಗ್ಯ ಮತ್ತು ಐಶ್ವರ್ಯ ಕೊಟ್ಟು ಕರುಣಿಸಲಿ ಮತ್ತು ಸರ್ವ ಸಕಲ ಭಕ್ತರ ಕಷ್ಟ ದೂರಾಗಲಿ ಶ್ರೀಮಾರೆಮ್ಮ ದೇವಿಯ ಕೃಪೆ ಈ ಭಾಗದ ಜನತೆಗೆ ಆಶೀರ್ವಾದ ಸದಾಕಾಲ ನೀಡಲಿ ಎಂದು ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಟಿ ಶೇಖರ್ ದೇವಿಯಲ್ಲಿ ಪ್ರಾರ್ಥಿಸಿಕೊಂಡರು.

ಈ ಭಾಗದ ದಲಿತಕೇರಿಯಲ್ಲಿ ಶ್ರೀಮಾರೆಮ್ಮ ದೇವಿಯ ದೇವಸ್ಥಾನದ ನೂತನ ಕಟ್ಟಡ ನಿರ್ಮಾಣ ಮಾಡುತ್ತಿದ್ದು, ಇದರ ಹಂತ ಅರ್ಧಕ್ಕೆ ನಿಂತಿದ್ದು ಈ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಜನ ಪ್ರತಿನಿಧಿಗಳು, ಉದ್ಯಮಿದಾರರು, ಕನ್ನಡ ಪರ ಸಂಘಟನೆಗಳ ಹೋರಾಟಗಾರರು ಮತ್ತು ಮಾರೆಮ್ಮ ದೇವಿಯ ದೇವಸ್ಥಾನದ ಸರ್ವ ಸಕಲ ಭಕ್ತಾದಿಗಳು ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ತನು ಮನ ದನದಿಂದ ಸಹಾಯ ಸಹಕಾರ ನೀಡಬೇಕೆಂದು ರಾಜ್ಯಾಧ್ಯಕ್ಷ ಪಿ.ಶೇಖರ್ ಭಕ್ತರಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಊರಿನ ಮುಖಂಡರಾದ ನೀಲಪ್ಪ, ರುದ್ರಪ್ಪ, ರಾಮಯ್ಯ, ಸಮಿತಿಯ ಬಂಡಿ ಹಟ್ಟಿ ಘಟಕದ ಅಧ್ಯಕ್ಷರಾದ ಮಲ್ಲಿ, ಉಪಾಧ್ಯಕ್ಷರಾದ ರಮೇಶ್, ಬಸವರಾಜ, ರಘು, ಗೌರವ ಅಧ್ಯಕ್ಷ ತಿಮ್ಮಣ್ಣ, ಸರ್ವರಿ, ಸಿದ್ದೇಶ್ ಸೇರಿದಂತೆ ಸಕಲ ಭಕ್ತಾದಿಗಳು ಈ ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.



# ತೇರು ಬಯಲು ಸ್ವಚ್ಛತೆ ಕಾರ್ಯಕೈಗೊಂಡ ಪಪಂ ಅಧ್ಯಕ್ಷೆ. ರೇಖಾರಮೇಶ್

● ವಾರ್ತಾಲೋಕ ವಾರ್ತೆ

**ಕೊಟ್ಟೂರು : ಅ12.** ನಾಡ ದಸರಾ ಹಬ್ಬದ ವಿಶೇಷತೆಯಲ್ಲಿ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಪಲಕ್ಕಿಯೊಂದಿಗೆ ಮೂಲ ಸ್ಥಾನದಿಂದ ತೇರುಬಯಲು ರಸ್ತೆಯ ಮಾರ್ಗವಾಗಿ ಹ್ಯಾಳ್ಯ ರಸ್ತೆಯಲ್ಲಿ ಇರುವ ಬನ್ನಿ ಮಂಟಪಕ್ಕೆ ಬಂದು ಬನ್ನಿ ಮುಡಿದು ಮತ್ತೆ ಅದೇ ರಸ್ತೆ ಮಾರ್ಗವಾಗಿ ಮೂಲ ಸ್ಥಾನಕ್ಕೆ ಹೋಗುವ ಪದ್ಧತಿ ಇದೆ ಬನ್ನಿಕಟ್ಟೆಯಲ್ಲಿ ಭಕ್ತಾದಿಗಳು ಎಲ್ಲರೂ ಬಂದು ಸ್ವಾಮಿಯ ಆಶೀರ್ವಾದ ಪಡೆದು ಬನ್ನಿ ಮರದಿಂದ ಬನ್ನಿ ತೆಗೆದುಕೊಂಡು ಹೋಗಿ ತಂದೆ ತಾಯಿ – ಗುರು ಹಿರಿಯರಿಂದ ಆಶೀರ್ವಾದ ಪಡೆದು ಗೆಳೆಯ ಗೆಳತಿ ಯೊಂದಿಗೆ ಬನ್ನಿ ಕೊಟ್ಟು ಶುಭಾಶಯ ಕೋರುವ ಧಾರ್ಮಿಕ ಪದ್ಧತಿ ಹೊಂದಿದೆ ಆದರೆ ಹಬ್ಬದ ದಿನದಂದೇ ಸುರಿದ ಬಾರಿ ಮಳೆಯಿಂದಾಗಿ ತೇರು ಬಯಲು ರಸ್ತೆಯು ಕೆಸರು ಗದ್ದೆಯಿಂದ ಹದಗೆಟ್ಟು ರಸ್ತೆ ಆವರಣ ತುಂಬಾ ಮಳೆ ನೀರು ಆವರಿಸಿ ಸಾರ್ವಜನಿಕರಿಗೆ ಹಾಗೂ ಭಕ್ತಾದಿಗಳಿಗೆ ಅನಾನುಕೂಲ ಉಂಟಾಗುವ ವಾತಾವರಣ ನಿರ್ಮಾಣ ವಾಯಿತು ಇದನ್ನು ತಕ್ಷಣ ಮನಃಗೊಂಡ ಪಪಂ.ಅಧ್ಯಕ್ಷೆ. ಬದ್ದಿ ರೇಖಾರಮೇಶ್ ರವರ ಸ್ಥಳಕ್ಕೆ ಆಗಮಿಸಿ ಪೌರಕಾರ್ಮಿಕ ಸಿಬ್ಬಂದಿ ಬಳಸಿಕೊಂಡು ಮಾರ್ಗದರ್ಶನ ಮಾಡುತ್ತ ತೇರು ಬಯಲು ರಸ್ತೆಯಲ್ಲಿ ನಿಂತ ನೀರನ್ನು ಚರಂಡಿಗೆ ಬಿಡಿಸುವ ಮೂಲಕ ರಸ್ತೆಗೆ ಗ್ರಾವೆಲ್ ಮತ್ತು ಎಂಸ್ಯಾಂಡ್ ಸಿಂಪಡಿಸುವ ಮೂಲಕ ಸುಮಾರು ಗಂಟೆಗಳ ಕಾಲ ಸ್ವಚ್ಛತೆ ಕಾರ್ಯ ಮಾಡಿಸುವಲ್ಲಿ ನಿರತರಾಗಿದ್ದರು ಇದನ್ನು ವೀಕ್ಷಿಸಿದ ಸಾರ್ವಜನಿಕರು ಮತ್ತು ಬೀದಿ ಬದಿ ವ್ಯಾಪಾರಸ್ಥರು ಇವರ ಈ ಕಾರ್ಯ ವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.



ನಂತರ ಪತ್ರಿಕೆಯೊಂದಿಗೆ ಮಾತನಾಡಿದ ಅವರು

ಇಡೀ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ತೇರು ಬಯಲು ರಸ್ತೆಯ ಮಾರ್ಗವು ಮತ್ತು ಸ್ವಾಮಿ ಬನ್ನಿ ಮೂಡಿಯುವ ಸ್ಥಳದಲ್ಲಿ ಮಳೆ ನೀರು ನಿಂತು ವಾಸನೆ ಅವರಿಸಿತ್ತು ಇದೆ ದಿವಸ ದಸರಾ ಹಬ್ಬ ಇರುವ ಸಂಬಂಧ ಪಟ್ಟಣ ಪಂಚಾಯತಿ ಸಿಬ್ಬಂದಿಯೊಂದಿಗೆ ಸ್ವಚ್ಛತಾ ಕಾರ್ಯ ಕೈಗೊಳ್ಳುವಲ್ಲಿ ಸ್ವಾಮಿಯ ಕಾರ್ಯ ಜರಗಿಸಲು ಒಂದು ಅಳಿಲು ಸೇವೆ ಮಾಡಲು ಅನುಕೂಲವಾಯಿತು ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಪಂ ಸದಸ್ಯರಾದ , ವಿನಯ್ ಕುಮಾರ್, ಕೆಂಗರಾಜ್ ಮುಖಂಡ ಬದ್ದಿ ಮರಿಸ್ವಾಮಿ, ದೇವಸ್ಥಾನ ಸಿಬ್ಬಂದಿ, ಪೌರಕಾರ್ಮಿಕ ಸಿಬ್ಬಂದಿ ವರ್ಗದವರು ಇದ್ದರು.

## ಅಕ್ಟೋಬರ್ 14ರಂದು ಕರ್ನಾಟಕ ಸ್ವಾಭಿಮಾನ ನಡಿಗೆ

# ಸರ್ಕಾರ ನಮ್ಮ ಅಭಿವೃದ್ಧಿಗಾಗಿ ನಿಗಮ ಮಂಡಳಿ ಸ್ಥಾಪಿಸಬೇಕು ವೀಣಾ ಲಿಂಗತ್ವ ಅಲ್ಪ ಸಂಖ್ಯಾತರು

● ವಾರ್ತಾಲೋಕ ವಾರ್ತೆ

**ಹೊಸಪೇಟೆ :ಅ.12:** ಚಿಗುರು ಸಮುದಾಯ, ಸಂಗಮ ಸಂಸ್ಥೆ ಮತ್ತು ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳುವಳಿಯ ಸಂಯೋಗದಲ್ಲಿ, ಲಿಂಗತ್ವ ಮತ್ತು ಲೈಂಗಿಕ ಅಲ್ಪ ಸಂಖ್ಯಾತರನ್ನು ಬೆಳಕಿಗೆ ತರಲು ಮತ್ತು ಅವರ ವಿಮೋಚನೆಗಾಗಿ ಇದೇ ಅಕ್ಟೋಬರ್ 14ರಂದು ಬೆಳಗ್ಗೆ 11:00ಗಂಟೆಗೆ ನಗರದ ವಡಕರಾಯ ದೇವಸ್ಥಾನದಿಂದ ಅಂಬೇಡ್ಕರ್ ವೃತ್ತದ ವರೆಗೆ "ಕರ್ನಾಟಕ ಸ್ವಾಭಿಮಾನ ನಡಿಗೆ" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವೀಣಾ ಬೆಂಗಳೂರು ಲಿಂಗತ್ವ ಮತ್ತು ಲೈಂಗಿಕ ಅಲ್ಪ ಸಂಖ್ಯಾತ ಹೋರಾಟಗಾರರು ಇವರು ತಿಳಿಸಿದರು.

ನಗರದ ಚರ್ಚ್ ಕಾಂಪ್ಲೆಕ್ಸ್ ನಲ್ಲಿರುವ ಕರ್ನಾಟಕ ಪತ್ರಕರ್ತರ ಸಂಘದ ಪತ್ರಿಕಾ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರು ಹೆಚ್ಚಾಗಿ ಕಂಡು ಬರುವ ಅಮೆರಿಕದ ನ್ಯೂಯಾರ್ಕ್ ನಗರದ ಗ್ರೀನ್ವಿಚ್, ನಲ್ಲಿರುವ ಸ್ಟೋನ್ವಾಲ್ ಇನ್ ಎನ್ನುವ ಬಾರ್ ಮೇಲೆ ಪೊಲೀಸರು ಜೂನ್ 29, 1969 ರಂದು ದಾಳಿ ನಡೆಸಿದರು. ಪೊಲೀಸರ ನಿರಂತರ ದಾಳಿಯಿಂದ ಕೆರಳಿ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರು ದಾಳಿಯನ್ನು ಪ್ರಭಲವಾಗಿ ವಿರೋಧಿಸಿ, ಅಂದಿನಿಂದ ಇಂದಿನವರೆಗೂ ಅವರ ಬೆಂಬಲಿಗರೊಂದಿಗೆ ಪ್ರೈಡ್ (ಸ್ವಾಭಿಮಾನ) ಕಾರ್ಯಕ್ರಮಗಳನ್ನು ಆಯೋಜಿಸುತ್ತಾಬಂದಿದ್ದು ಮತ್ತು ಸ್ಟೋನ್ವಾಲ್ ದಂಗೆಯ ದಿನವನ್ನು ಆಚರಿಸಲು ವಿಶ್ವದಾದ್ಯಂತ ನಗರಗಳ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾ ಬರಲಾಗಿದೆ . ಇದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಧುನಿಕ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಚಳುವಳಿಯ ಹುಟ್ಟು ಎಂದು ಪರಿಗಣಿಸಲ್ಪಟ್ಟಿದೆ. ಈ ಸಂದರ್ಭದಲ್ಲಿ ಈ ನಮ್ಮ ಸ್ವಾಭಿಮಾನಿ ಕಾರ್ಯಕ್ರಮವು ಬೆಂಗಳೂರಿನಿಂದ ವಿಜಯನಗರ ಜಿಲ್ಲೆಗೆ ಕಾಲಿಟ್ಟಿದೆ. ಅಂದು ನಗರದಲ್ಲಿ ಸಾಂಪ್ರದಾಯಿಕ ಉಡುಗೆತೊಡುಗೆಗಳನ್ನು ತೊಟ್ಟು, ನೃತ್ಯ ಮಾಡುತ್ತಾ, ಸಂಗೀತ ಆಡುತ್ತಾ, ವಾದ್ಯಗಳೊಂದಿಗೆ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾ ಜಿಲ್ಲಾಧಿಕಾರಿಗಳಿಗೆ ನಮ್ಮ ಹಲವು ಬೇಡಿಕೆಗಳ ಮನವಿಯನ್ನು ಸಲ್ಲಿಸಲಾಗುವುದು ಎಂದರು.



ವೈಶಾಲಿ ಹೋರಾಟಗಾರ್ತಿ ಮಾತನಾಡಿ ಸಂವಿಧಾನ ಆರ್ಟಿಕಲ್ 21ಪ್ರಕಾರ ಪ್ರತಿಯೊಬ್ಬರಿಗೂ ಜೀವಿಸುವ ಹಕ್ಕಿದೆ. ಜನ ಸಾಮಾನ್ಯರಿಗೆ ಹೇಗೆ ಸರ್ಕಾರದ ಮೂಲಭೂತ ಸೌಲಭ್ಯಗಳು ಸಿಗುತ್ತವೆಯೋ, ಹಾಗೆ ನಮಗೂ ಸಹ ಮೂಲಭೂತ ಸೌಲಭ್ಯಗಳು ಸಿಗಬೇಕು, ಸಂವಿಧಾನದಲ್ಲಿ ಪ್ರತಿಯೊಬ್ಬರು ಪ್ರತಿಯೊಂದನ್ನು ಪಡೆದುಕೊಂಡು ಜೀವಿಸುವ ಹಕ್ಕಿದೆಯೋ ಹಾಗೆ ನಮಗೂ ಸಹ ಹಕ್ಕಿದೆ. ನಾವು ನಮ್ಮ ಮೂಲ ಕುಟುಂಬವನ್ನು ತೊರೆದಾಗ ನಮಗೆ ಮತ್ತೊಂದು ಕುಟುಂಬ ಸಿಗುತ್ತದೆ. ಎಲ್ಲರಂತೆ ನಮಗೂ ಸಹ ಸಹಜೀವನ ನಡೆಸಬೇಕೆನ್ನುವ ಆಸೆ ಆಕಾಂಕ್ಷೆಗಳು ಇರುತ್ತವೆ. ಅಂತ ಪರಿಸ್ಥಿತಿಯಲ್ಲಿ ನಮಗೆ ಆರ್ಥಿಕವಾಗಿ ಮೂಲಭೂತ ಸೌಲಭ್ಯಗಳು ಸಿಗದೇ ನಾವು ವಂಚಿತರಾಗಿ ಕಷ್ಟದ ಜೀವನ ಸಾಗಿಸುತ್ತೇವೆ.

ನಮ್ಮನ್ನು ಈ ಸಮಾಜ ಒಪ್ಪಿಕೊಂಡು ಅಪ್ಪಿಕೊಂಡು ಬದುಕುವುದಕ್ಕೆ ಸಹಕರಿಸಬೇಕೆನ್ನುವ ಹಂಬಲ ನಮಗೂ ಇದೆ. ಮಂಗಳಮುಖಿಯರು ದೇವರೆಂದು ನಮ್ಮಿಂದ ಒಂದು ರೂಪಾಯಿ ಪಡೆದು ಆಶೀರ್ವಾದ ತೆಗೆದುಕೊಳ್ಳುವವರೆಗೆ ನಮ್ಮನ್ನು ಗೌರವಿಸುತ್ತಾರೆ. ಮರುಕ್ಷಣವೇ ನಮ್ಮನ್ನು ನೋಡುವ ದೃಷ್ಟಿಯೇ ಬೇರೆ ಆಗುತ್ತದೆ. ನಮ್ಮ ಮೇಲೆಯೂ ನಿರಂತರ ದೌರ್ಜನ್ಯ ನಡೆಯುತ್ತಿವೆ ಇವೆಲ್ಲ ನಿಲ್ಲಬೇಕು. ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರು ಸಮಾಜದಲ್ಲಿ ಸ್ವಾತಂತ್ರ್ಯ ಮತ್ತು ಘನತೆಯಿಂದ ಬದುಕಲು ಸರ್ಕಾರ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಈ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬ ನಾಗರಿಕರು ಭಾಗವಹಿಸಿ ಸಹಕಾರ ಕೊಡಬೇಕೆಂದು ಮನವಿ ಮಾಡಿದರು.

ಕರ್ನಾಟಕ ಸ್ವಾಭಿಮಾನ ನಡಿಗೆಯಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಮಾತಾ ಮಂಜಮ್ಮ ಜೋಗತಿ ಹಾಗೂ ಇತರೆ ಗಣ್ಯ ವ್ಯಕ್ತಿಗಳು ಭಾಗವಸುವರು ಎಂದು ಮಾಹಿತಿ ನೀಡಿದರು.

ನಮ್ಮೊಂದಿಗೆ : ಚಿಗುರು ಸಮುದಾಯ ಸೇವಾ ಸಂಸ್ಥೆ, ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳುವಳಿ, ಸಂಗಮ, ಸೌಖ್ಯ ಬೆಳಕು ಸಮುದಾಯ ಸೇವಾ ಸಂಸ್ಥೆ, ಕರ್ನಾಟಕ ರಾಜ್ಯ ಬುಡ್ಗ ಜಂಗಮ್, ಕರ್ನಾಟಕ ರಾಜ್ಯ ರೈತ ಸಂಘಟನೆ, ಬಸವ ಬಳಗ, ಕ್ರಿಶ್ಚಿಯನ್ ಕಮಿಟಿ, ಬಂಡಾಯ ಸಾಹಿತ್ಯ, ವಿಶೇಷ ಚೇತನರ ಸಂಘಟನೆ, ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ, ಬಳ್ಳಾರಿ ಜಿಲ್ಲಾ ಅಲೆಮಾರಿ ಗೊಸಂಗಿ ಸಮಾಜ ಸಂಘ, ವಿಜಯನಗರ ಜಿಲ್ಲಾ ಬಾಬಾ ಸಾಹೇಬ ಡಾ. ಬಿ ಆರ್ ಅಂಬೇಡ್ಕರ್ ಸಂಘ, ದಲಿತ ವಿದ್ಯಾರ್ಥಿ ಪರಿಷತ್ ವಿಜಯನಗರ ಜಿಲ್ಲಾ ಘಟಕ ಇವರೆಲ್ಲರ ಸಹಕಾರದೊಂದಿಗೆ ಕಾರ್ಯಕ್ರಮ ನೆರವೇರಲಿದೆ ಎಂದರು.

" ಸರ್ಕಾರ ನಮಗೆ ಪ್ರತ್ಯೇಕ ನಿಗಮ ಮಂಡಳಿ ಸ್ಥಾಪಿಸಬೇಕು ಅದರಲ್ಲಿ 200 ಕೋಟಿಗೂ ಹೆಚ್ಚು ಮೀಸಲಿಟ್ಟು ನಮ್ಮ ಅಭಿವೃದ್ಧಿಗೆ ಒತ್ತುಕೊಡಬೇಕು.

ಸರ್ಕಾರಿ ಜಾಗದಲ್ಲಿ ವಾಸಿಸುತ್ತಿರುವ ನಮ್ಮವರಿಗೆ ನಿವೇಶನದ ಹಕ್ಕುಪತ್ರ ನೀಡಿ ಸೂರು ಕಲ್ಪಿಸಿಕೊಡಬೇಕು."

ಪ್ರಗತಿ ಚಿಗುರು ಸಮುದಾಯ ಸೇವಾ ಸಂಸ್ಥೆ ಸದಸ್ಯರು, ಮಂಜಮ್ಮ ಜೋಗತಿ ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳುವಳಿಯ ಜಿಲ್ಲಾ ಘಟಕದ ಸಹ ಅಧ್ಯಕ್ಷರು ಕೂಡ್ಲಿಗಿ, ಸುಧಾ ಕಲ್ಲಳ್ಳಿ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಚಿಗುರು ಸಮುದಾಯ ಸದಸ್ಯರು ಸುದ್ದಿಗೋಷ್ಠಿಯಲ್ಲಿದ್ದರು.

**ವರದಿ, ಲಕ್ಕಿಮರದ ಮಂಜುನಾಥ**

VARTHALOKA Kannada Daily Morning News Paper Printed at NIKHIL OFFSET PRINTES Ward No. 23, Buddha Circle, Hosalli Main Road, GANGAVATHI-583227. Dist: Koppal,
Editor & Published by Mohammed jeelan. G., Rajasab Compound, Opp. Kulayappa Building, 1st Cross, Patel Nagar, HOSPET Dist : Vijaynagar, Mob. No.: 9482156289 E-Mail: Varthalokahpt@gmail.com